# ೫ನೇ ಭಾಗ.

## ಬಂಡವಲು.

ಬಂಡವಲು.—ನಾಲ್ಕೂ ಜಿಲ್ಲೆಗಳಲ್ಲಿ ವರ್ಷಕ್ಕೆ ೧೦೦ರಿಂದ ೧೦೦೦ ರೂಪಾಯಿಯ ವರೆಗೆ ಆದಾಯವುಳ್ಳ ಜನರು ವೊಟ್ಟಿಗೆ ಸುಮಾರು ೪೨೭೫೦ ಇರುತ್ತಾರೆ. ಅವರಲ್ಲಿ ಧಾರವಾಡ ಜಿಲ್ಲೆಯಲ್ಲಿ ೨೧೦೪೬ ಜನ, ಬೆಳಗಾವೀ ಜಿಲ್ಲೆಯಲ್ಲಿ ೧೮೧೪ ಜನ, ವಿಜಾಪುರ ಜಿಲ್ಲೆಯಲ್ಲಿ ೧೫೮೨೪ ಜನ, ಕಾನಡಾ ಜಿಲ್ಲೆಯಲ್ಲಿ ೪೦೬೬ ಜನ. ೧೦೦೦೦ ರೂಪಾಯಿಗಿಂತ ಹೆಚ್ಚು ಆದಾಯವುಳ್ಳವರು ವೊಟ್ಟಿಗೆ ೩೮ ಜನರುಂಟು. ಇವರಲ್ಲಿ ಧಾರವಾಡ ಜಿಲ್ಲೆಯಲ್ಲಿ ೧೯ ಜನ, ಬೆಳಗಾವೀ ಜಿಲ್ಲೆಯಲ್ಲಿ ೫ ಜನ, ವಿಜಾಪುರ ಜಿಲ್ಲೆಯಲ್ಲಿ ೧೧ ಜನ, ಕಾನಡಾ ಜಿಲ್ಲೆಯಲ್ಲಿ ೩ ಜನ ಇರುತ್ತಾರೆ.

**ಬಂಡವಲು.**

ಹುಂಡೀ ವ್ಯವಹಾರ.—ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಹುಬ್ಬಳ್ಳಿ, ಗದಗು; ಬೆಳಗಾವೀ ಜಿಲ್ಲೆಯಲ್ಲಿ ಅಥಣಿ, ಗೋಕಾವಿ, ಬೆಳಗಾವಿ, ಹೊಂಗಲ, ನಂದಗಡ, ನಿಪಾಣಿ ಸಂಕೇಶ್ವರ, ಸವದತ್ತಿ; ವಿಜಾಪುರ ಜಿಲ್ಲೆಯಲ್ಲಿ ವಿಜಾಪುರ, ತಾಳೀಕೋಟೆ, ಬಾಗಲಕೋಟೆ; ಕಾನಡಾ ಜಿಲ್ಲೆಯಲ್ಲಿ ಕುಮಟಾ, ಕಾರವಾಡ, ಸಿರಸಿ, ಈ ಗ್ರಾಮಗಳಲ್ಲಿ ಹುಂಡೀ ಕೊಡತಕ್ಕೊಳ್ಳುವ ವ್ಯವಹಾರ ನಡಿಯುತ್ತದೆ. ಆದರೆ ಬೆಳಗಾವಿಯ ಹತ್ತರ ಸಾಂಗಲೀ ಸಂಸ್ಥಾನಕ್ಕೆ ಶೇರಿದ ಶಹಾಪುರದಲ್ಲಿ ನಡಿಯುವಷ್ಟು ಹುಂಡಿಯ ವ್ಯವಹಾರವು ಬೇರೆ ಯಾವ ಕಡೆಯಲ್ಲಿಯೂ ನಡಿಯುವದಿಲ್ಲೆಂದು ಹೇಳ ಬಹುದು. ಈ ಸಣ್ಣ ಗ್ರಾಮದಲ್ಲಿ ಪ್ರತಿ ವರ್ಷ ಸುಮಾರು ೮ ಲಕ್ಷ ರೂಪಾಯಿಯ ಹುಂಡಿಯ ವ್ಯವಹಾರವಾಗುತ್ತದೆ. ಆದರೆ ಸನ್ ೧೮೨೦ರಲ್ಲಿ ಶಹಾಪುರದಲ್ಲಿ ಹುಬ್ಬಳ್ಳಿ, ಮಿರ್ಜೆ, ಈ ಗ್ರಾಮಗಳಲ್ಲಿಯ ಹುಂಡೀ ಸಾವಕಾರರ ದಲಾರರು ಮಾತ್ರ ಇರುತ್ತಿದ್ದರು; ಈಗ ಲಕ್ಷಾವಧಿ ರೂಪಾಯಿಯ ಸಾವಕಾರರು ಬಹು ಜನರಿದ್ದಾರೆ. ಮೇಲೆ ಹೇಳಿದ ಗ್ರಾಮಗಳಲ್ಲಿಯ ಸಾವಕಾರರು ಪರಸ್ಪರರ ಮೇಲೆ ಹುಂಡಿಗಳನ್ನು ಕೊಡುವದಲ್ಲದೆ, ಮುಂಬಯಿ, ಮದ್ರಾಸು, ಪುಣೆ, ಸಾತಾರೆ, ವೆಂಗುರ್ಲೆ, ಚಿಪಳೂಣ, ಮುಂತಾದ ಗ್ರಾಮಗಳಿಗೂ ಹುಂಡಿಗಳನ್ನು ಕೊಡುವರು. ಹುಬ್ಬಳ್ಳಿಯಲ್ಲಿ ಮುಂಬಯಿ ಬ್ಯಾಂಕಿನ ಅಂಗಡಿಯುಂಟು. ಈ ಬ್ಯಾಂಕಿನಲ್ಲಿ ದೇಶೀ ಜನರು ಹಣ ಇಡುವದು ಬಹು ಕಡಿಮೆ. ಈ ಬ್ಯಾಂಕಿನಲ್ಲಿ ಹುಂಡಿಯ ವ್ಯಾಪಾರವು ವರ್ಷಕ್ಕೆ ನಾಲ್ಕುವರೆ ಲಕ್ಷದಿಂದ ಆರು ಲಕ್ಷದ ವರೆಗೆ ಆಗುತ್ತದೆ; ಅದರಲ್ಲಿ ಯುರೋಪಿಯನ್ ವ್ಯಾಪಾರಸ್ಥರ ಸಂಗಡ ೩ ಲಕ್ಷದಿಂದ ೪ ಲಕ್ಷದ ವರೆಗೆ, ದೇಶೀ ವ್ಯಾಪಾರಸ್ಥರ ಸಂಗಡ ವೊಂದುವರೆ ಲಕ್ಷದಿಂದ ೨ ಲಕ್ಷದ ವರೆಗೆ.

**ಹುಂಡಿ.**

ನಾಣ್ಯಗಳು.

ನಾಣ್ಯಗಳು.—ಬ್ರಿಟಿಶ ಸರಕಾರದ ಅಮಲು ಬರುವ ಪೂರ್ವದಲ್ಲಿ ಈ ಶೀಮೆಯಲ್ಲಿ ನಾನಾ ಪ್ರಕಾರದ ಬಂಗಾರ, ಬೆಳ್ಳಿ, ತಾಮ್ರಗಳ ನಾಣ್ಯಗಳು ನಡಿಯುತ್ತಿದ್ದವು. ಅವುಗಳ ವಿವರ—

ಚಿನ್ನದ ನಾಣ್ಯಗಳು.—ರಾಮಟೆಂಕೀ ಮೊಹರು, ಕಿಮ್ಮತ್ತು ರೂ. ೪೦, ಹಣಮಟೆಂಕಿ ರೂ. ೧೮, ಪದ್ಮಟೆಂಕಿ ರೂ. ೧೮, ಅಕಬರೀ ಮೊಹರು ರೂ. ೧೬. ರಾಮಟೆಂಕೀ ನಾಣ್ಯವು ಕಟಾಕಟಿ ನಾಲ್ಕು ತೊಲಿ ಇರುತ್ತಿತ್ತು. ಅದರ ಅರ್ಧದ ನಾಣ್ಯಕ್ಕೆ ಪ್ರತಾಪವೆನ್ನುವರು; ಅದು ೨ ತೊಲಿ ತೂಕವಿರುತ್ತಿತ್ತು; ಕಾಲು ಪಾಲಿನ ನಾಣ್ಯಕ್ಕೆ ಧರಣವೆನ್ನುವರು; ಅದು ೧ ತೊಲಿ ತೂಕವಿರುತ್ತಿತ್ತು. ಆದರೆ ಈ ಬೆಲೆಯುಳ್ಳ ನಾಣ್ಯಗಳು ಕ್ವಚಿತ್ತಾಗಿ ನಡಿಯುತ್ತಿದ್ದವು. ವಾಡಿಕೆಯಾಗಿ ವರಹ, ಹೊನ್ನು ಯೆಂಬ ನಾಣ್ಯಗಳೇ ಬಹಳ ನಡಿಯುತ್ತಿದ್ದವು. ಬುನಾದಿಯಲ್ಲಿ ಈ ಶೀಮೆಯನ್ನು ಬಹು ದಿವಸ ಆಳಿದ ಚಾಲುಕ್ಯ ಅರಸರ ಕಾಲದಲ್ಲಿ ಸುಮಾರು ನಾಲ್ಕು ರೂಪಾಯಿ ಬೆಲೆ ಬಾಳುವಂಥಾದ್ದೊಂದು ಚಿನ್ನದ ನಾಣ್ಯ ನಡಿಯುತ್ತಿತ್ತು. ಅದರ ಮೇಲೆ ವರಾಹ ದೇವರ ಆಕೃತಿ ಇದ್ದ ಕಾರಣ ಅದಕ್ಕೆ ವರಾಹವೆಂಬ ಹೆಸರು ಬಿತ್ತು. ಮುಂದೆ ಬೇರೆ ಅರಸರು ಹೆಚ್ಚು ಕಡಿಮೆ ಅದರಷ್ಟೇ ಬೆಲೆ ಬಾಳುವ ನಾಣ್ಯಗಳನ್ನು ವರಾಹನ ಆಕೃತಿ ಇಲ್ಲದೆ ಮುದ್ರಿಸಿದಾಗ್ಯೂ, ಹಿಂದಿನ ಬಹು ದಿವಸದ ರೂಢಿಯ ಮೂಲಕ ಅವರ ನಾಣ್ಯಗಳಿಗೆ ಸಹ ವರಾಹವೆಂಬ ಹೆಸರೇ ನಡಿಯುತ್ತ ಬಂತು. ಆದರೆ ಕಡೆಯಲ್ಲಿ ಮೈಸೂರಿನ ಹೈದರ ಅಲ್ಲಿಯು ತಾನು ಹೊಸದಾಗಿ ಮುದ್ರಿಸಿದ ನಾಣ್ಯಕ್ಕೆ ವರಾಹವೆಂಬ ಹೆಸರು ಕೊಡದೆ ಹೊನ್ನೆಂಬ ಹೆಸರಿಟ್ಟನು. ಅಂದಿನಿಂದ ವರಾಹ, ಹೊನ್ನು, ಇವೆರಡೂ ಬಹುತರ ವೊಂದೇ ಅರ್ಥದ ಹೆಸರುಗಳಾಗಿ ನಡಿಯುತ್ತ ಬಂದವು. ಬ್ರಿಟಿಶ ಸರಕಾರದ ಅಮಲಿನ ಆರಂಭದಲ್ಲಿ ಈ ಶೀಮೆಯಲ್ಲಿ, ಮುಖ್ಯವಾಗಿ ಮಲಾಪಹಾರಿಯ ದಕ್ಷಿಣದಲ್ಲಿ, ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ—೧ ಗಜಪತಿ (ವಿಜಯನಗರದ ಅರಸರದು) ಕಿಮ್ಮತ್ತು ರೂಪಾಯಿ ೪, ಆ. ೮; ೨ ಬಹಾದುರೀ (ಹೈದರನದು) ರೂ. ೪, ಆ. ೮; ೩ ಹೊಸ ಇಕ್ಕೇರಿ (ಇಕ್ಕೇರೀ ಅರಸರದು) ರೂ. ೪, ಆ. ೮; ೪ ಹಳೆ ಇಕ್ಕೇರಿ, ರೂ. ೪; ೫ ಸುಲ್ತಾನೀ (ಟೇಪುನದು) ರೂ. ೪; ೬ ದುರ್ಗಿ, ೭ ಜಮುಶೇರೀ, ೮ ಮಾಗದಿ, ರೂ. ೩, ಆ. ೧೨; ೯ ಧಾರವಾಡೀ, ೧೦ ನವಲಗುಂದಿ, ೧೧ ಬನವಾಸೀ, ೧೨ ಶಮುಶೇರಿ, ೧೩ ಅಶ್ವಪತಿ, ೧೪ ವೆಂಕಟಪತಿ, ಇವೆಲ್ಲ ಕಿಮ್ಮತ್ತು ರೂ. ೩, ಆ. ೮; ೧೫ ಸಾತಾರಿ, ೧೬ ಅಲಂಗಿರೀ, ೧೭ ಕಂಠೀರಾಯಿ, ರೂ. ೩, ಆ. ೪; ೧೮ ಸವಣೂರಿ, ರೂ. ೩. ಹೊನ್ನಿನ ನಾಲ್ಕನೇ ಪಾಲಿನಷ್ಟು ವೊಂದು ಚಿನ್ನದ ನಾಣ್ಯವಿರುತ್ತಿತ್ತು; ಅದಕ್ಕೆ ಹಣವೆಂತಲೂ, ಫಲವೆಂತಲೂ, ಅನ್ನುವರು.

ಬೆಳ್ಳಿಯ ನಾಣ್ಯಗಳು.—ಬ್ರಿಟಿಶ ಸರಕಾರದ ಅಮಲು ಆದ ಬಳಿಕ ಸಹ ಸನ್ ೧೮೪೦ರ ವರೆಗೆ ಹದಿನಾರು ಪ್ರಕಾರದ ರೂಪಾಯಿಗಳು ನಡಿಯುತ್ತಿದ್ದವು. ಅವು—ಔರಂಗಾಬಾದಿ, ೨ ಬಾಗಲಕೋಟ ಅಥವಾ ಮಲ್ಹಾರ ಶಾಹಿ, ೩ ಅಂಕುಶೀ, ೪ ಹಲ್ಲೀ

ತಿಕ್ಕಾ, ೫ ಶಹಾಪುರೀ, ೬ ಕಿತ್ತೂರ ಶಹಾಪುರೀ, ೭ ಧಾರವಾಡೀ, ೮ ಹೈದರಾಬಾದಿ, ೯ ಪನಾಳೀ, ೧೦ ನೀಲಕಂಠೀ, ೧೧ ಭೂತಪದಿ, ೧೨ ಚಾಂದೋಡಿ, ೧೩ ಹುಕ್ಕೇರಿ, ೧೪ ಉಡವಣಿ, ೧೫ ಗೋವಿಂದ ಬಕ್ಷಿ, ೧೬ ಪೀರಖಾನಿ. ಇವುಗಳಲ್ಲಿ ಪನಾಳಿ ನೀಲಕಂಠಿ, ಇವೆರಡು ಬಹಳ ಕಡಿಮೇ ಬೆಲೆ ಬಾಳುವಂಥವು (ಸುಮಾರು ೧೦ ಆಣೆ) ಇದ್ದವು; ಭೂತಪದೀ ರೂಪಾಯಿಯ ಬೆಲೆಯು ಸುಮಾರು ೫ ಆಣೆ ಇತ್ತು. ಉಳಿದವು ಹೆಚ್ಚು ಕಡಿಮೆ ಸೂರ್ತಿ ರೂಪಾಯಿಗೆ ಹೊಂದುತ್ತಿದ್ದವು.

ತಾಮ್ರದ ನಾಣ್ಯಗಳು.— ಈ ಶೀಮೆಯಲ್ಲಿ ಮೊದಲು ಪೇಶವಾಯಿ ಅಮಲು ಇದ್ದ ಕಾರಣ ಹೆಚ್ಚಾಗಿ "ಶಾಹೂಪೈಸಾ" ಯೆಂಬ ಹೆಸರಿನ ನಾಣ್ಯವು ಯೆಲ್ಲ ಕಡೆಯಲ್ಲಿ ನಡಿಯುತ್ತಿತ್ತು; ಅದಕ್ಕೆ ದುಡ್ಡೆನ್ನುವರು. ಒಂದು ದುಡ್ಡಿಗೆ ಮೂರು ರುವಿ. ಶಾಹೂ ದುಡ್ಡಲ್ಲದೆ ಶಾಹೀ ದುಡ್ಡು ಅಥವಾ ಕರೆದುಡ್ಡು ನಡಿಯುತ್ತಿತ್ತು; ಇದು ನಾಲ್ಕು ರುವಿ ಬೆಲೆಯುಳ್ಳದ್ದಾದ್ದರಿಂದ ಇದಕ್ಕೆ ಗಟ್ಟಿ ದುಡ್ಡೆಂತಲೂ ಅನ್ನುವರು. ರೂಪಾಯಿಗೆ ಗಟ್ಟಿ ದುಡ್ಡು ೪೮ ಅಥವಾ ಮೂರು "ಟಂಕ." ಆನೀ ದುಡ್ಡು ವಿಜಯನಗರ ಅರಸರ ನಾಣ್ಯವು; ಇದಾದರೂ ಗಟ್ಟಿ ದುಡ್ಡೆಂದೆಣಿಸಲ್ಪಡುವದು; ಈ ದುಡ್ಡಿಗೆ ಯೆರಡು ಕಾಸುಗಳೆಂಬ ನಾಣ್ಯಗಳಿದ್ದವು. ಕಂಪನಿಯವರ ದುಡ್ಡಿನ ನಾಣ್ಯವು ಸನ್ ೧೮೩೫—೩೬ರಲ್ಲಿ ನಡಿಯಹತ್ತಿತು.

**ಟಂಕಸಾಲೆಗಳು.**

ಟಂಕಸಾಲೆಗಳು.— ಧಾರವಾಡದಲ್ಲಿ ಬಾಳಾಜೀ ಬಾಜೀರಾವ ಪೇಶವೇ ಇವರು ಸನ್ ೧೭೫೩ರಲ್ಲಿ ಸ್ಥಾಪಿಸಿದ ಟಂಕಸಾಲೆಯು ಸನ್ ೧೮೧೭ರಲ್ಲಿ ಬ್ರಿಟಿಶ ಸರಕಾರದವರು ಈ ಶೀಮೆಯನ್ನು ತಕ್ಕೊಳ್ಳುವ ವರೆಗೆ ನಡಿಯುತ್ತಿತ್ತು. ಇದರಲ್ಲಿ ಧಾರವಾಡೀ ಹೊನ್ನುಗಳನ್ನೂ ರೂಪಾಯಿಗಳನ್ನೂ ಮುದ್ರಿಸುವರು. ಬಾಗಲಕೋಟೆಯಲ್ಲಿ ಮಲ್ಹಾರ ಭಿಕ್ಕಾಜೀ ರಾಸ್ತೆ ಯೆಂಬವರು ರೂಪಾಯಿಗಳನ್ನು ಮುದ್ರಿಸುವ ಟಂಕಸಾಲೆಯನ್ನಿಟ್ಟಿದ್ದರು. ಅದರಲ್ಲಿ ಹುಟ್ಟಿದ ರೂಪಾಯಿಗಳಿಗೆ ಮಲ್ಹಾರ ಶಾಹೀ ರೂಪಾಯಿಗಳೆಂದೆನ್ನುವರು. ಕಂಪನೀ ಸರಕಾರದ ಅಮಲು ಸನ್ ೧೮೧೭ರಲ್ಲಿ ಕೂತ ಬಳಿಕ ಸಹ ಸನ್ ೧೮೩೩ರ ವರೆಗೆ ಈ ಟಂಕಸಾಲೆ ನಡಿಯುತ್ತಿತ್ತು. ಕಂಪನಿಯವರ ಅಮಲಿನಲ್ಲಿ ಟಂಕಸಾಲೆಯವರೆಂಬ ಮನೆತನದವರು ಕಂಪನಿಯವರ ಅಪ್ಪಣೆಯಿಂದ ಮಲ್ಹಾಶಾಹೀ ರೂಪಾಯಿಗಳನ್ನು ಮುದ್ರಿಸುವರು. ಆ ರೂಪಾಯಿಯ ಬೆಳ್ಳಿಯು ಇಂತಿಷ್ಟೇ ವರೆಯುಳ್ಳದ್ದಿರ ಬೇಕೆಂದು ಕಂಪನಿಯವರು ಗೊತ್ತು ಮಾಡಿ ಕೊಟ್ಟಿದ್ದರು. ಮುಧೋಳದಲ್ಲಿಯೂ ಯೊಂದು ಟಂಕಸಾಲೆ ಸನ್ ೧೮೨೦ರ ವರೆಗೆ ನಡಿಯುತ್ತಿತ್ತು. ಅದರಲ್ಲಿಯೂ ಈ ಮಲ್ಹಾರಶಾಹೀ ರೂಪಾಯಿಗಳನ್ನೂ ಗೋವಿಂದರಾಜೀ ದುಡ್ಡುಗಳನ್ನೂ ಮುದ್ರಿಸುವರು. ಗೋವಿಂದರಾಜೀ ದುಡ್ಡುಗಳು ಮುಧೋಳದಲ್ಲಿ ಸನ್ ೧೮೬೦ರ ವರೆಗೆ ನಡಿಯುತ್ತಿದ್ದವು. ಜಮಖಂಡಿಯ ಸಂಸ್ಥಾನದಲ್ಲಿ ಜಮಖಂಡಿಯ ದುಡ್ಡೆಂಬ ನಾಣ್ಯವು ನಡಿಯುತ್ತಿದ್ದ ಕಾರಣ ಅಲ್ಲಿಯೂ ಯೊಂದು ಟಂಕಸಾಲೆ ಇತ್ತೆಂದು ತೋರುತ್ತದೆ.

ಟಂಕಸಾಲೆಯಲ್ಲಿ ೧೨೫೦ ರೂಪಾಯಿ ತೂಕ ಬೆಳ್ಳಿಯನ್ನು ತಸ್ತದಂಥಾದ್ದೊಂದು ಮುಶಿಯೊಳಗೆ ಯೆರಡು ತಿದಿಗಳನ್ನು ಊದಿ ಕರಗಿಸುವರು. ಕರಗಿದ ಬೆಳ್ಳಿಯನ್ನು ವೊಬ್ಬ ಗಟ್ಟಿಗನಾದ ಮನುಷ್ಯನು ಯೆರಡು ಚಿಮುಟಿಗೆಗಳಿಂದ ಹಿಡಿದು ಯೆತ್ತಿ, ಮಣ್ಣಿನ ಹಲಿಗೆಗಳಲ್ಲಿ ಮಾಡಿದ ಕಾವಲಿಗಳಲ್ಲಿ ಸುರುವುವನು. ಬಳಿಕ ಪತ್ತಾರನು ಆ ಗಟ್ಟಿಗಳಲ್ಲಿ ವೊಂದನ್ನು ತಕ್ಕೊಂಡು ನಟ್ಟ ನಡುವೆ ಕಡಿದು, ವೊಂದು ರೂಪಾಯಿ ತೂಕ ತುಂಡನ್ನು ಕಡಿದುಕೊಂಡು, ಅದಕ್ಕೆ ಅಷ್ಟೇ ಸೀಸು ಕೂಡಿಸಿ ಸಣ್ಣ ಮುಶಿಯೊಳಗೆ ಹಾಕಿ ಜಾಲಗಾರನ ಕೈಯಲ್ಲಿ ಕರಗಿಸಲಿಕ್ಕೆ ಕೊಡುವನು. ಅದು ಕರಗಿದ ಬಳಿಕ ಪತ್ತಾರನು ಅದರೊಳಗಿನ ಬೆಳ್ಳಿಯ ಗಟ್ಟಿಯನ್ನು ತೆಗೆದು ವೊಳಿತಾಗಿ ಬಡಿದು ಸರಾಫನ ಕೈಯಲ್ಲಿ ಕೊಡುವನು. ಆ ಚೊಕ್ಕ ಬೆಳ್ಳಿಯನ್ನು ಸರಾಫನು ತೂಗಿ ನೋಡಿ, ತಕ್ಕ ಪ್ರಮಾಣದ್ದಾಯಿತೆಂದು ಮನಗಂಡರೆ ಗಟ್ಟಿಗಳನ್ನು ಬಡಿಯಲಿಕ್ಕೆ ಹೇಳುವನು; ಚೊಕ್ಕ ಬೆಳ್ಳಿಯು ಹೊರಡ ತಕ್ಕಷ್ಟು ಹೊರಡದಿದ್ದರೆ, ಯಾವತ್ತು ಗಟ್ಟಿಗಳನ್ನು ಮತ್ತೆ ಕರಗಿಸಿ ಶುದ್ಧ ಮಾಡ ಬೇಕಾಗುತ್ತಿತ್ತು. ಈ ಪ್ರಕಾರ ಗೊತ್ತು ಮಾಡಿದ ವರೆಯ ಗಟ್ಟಿಗಳು ಸಿದ್ಧವಾದ ಬಳಿಕ ಅವುಗಳನ್ನು ಬಡಿದು ವೊಂದೇ ಸವನಾದ ಚೌಕ ಸಲಾಕಿಗಳನ್ನು ಮಾಡುವರು. ಆ ಸಲಾಕಿಗಳನ್ನು ಹಿರಿ ಪತ್ತಾರನು ನಜರಿನ ಅಜಮಾಸಿನಿಂದ ಕಡಿದು ವೊಂದೊಂದು ರೂಪಾಯಿ ತೂಕ ತುಂಡುಗಳನ್ನು ಮಾಡುವನು. ಆ ತುಂಡುಗಳನ್ನು ಸರಾಫನು ತೂಗಿ ನೋಡಿ, ಹೆಚ್ಚಿದ್ದರೆ ಕಡಿದು ಸಮ ಮಾಡುವನು. ಬಳಿಕ ಪತ್ತಾರನು ವೊಂದೊಂದು ತುಂಡನ್ನು ಬಡಿಗಲ್ಲಿನ ಮೇಲಿಟ್ಟು, ಯೆರಡಾಗಲಿ ಮೂರು ಸುತ್ತಿಗೆಯ ಪೆಟ್ಟುಗಳಿಂದ ಅವುಗಳಿಗೆ ರೂಪಾಯಿಯ ಆಕಾರ ಕೊಡುವನು. ಪಡಿಯಚ್ಚು ಹೊಡಿಯುವ ಪತ್ತಾರನು ಈ ತುಂಡುಗಳನ್ನು ಕಾಸಿ, ನುಣುಪಾದ ಬಡಿಗಲ್ಲಿನ ಮೇಲಿಟ್ಟು ಬಡಿದು ಬೆಳ್ಳಗೆ ಮಾಡುವನು. ಒಂದು ವೈಯ ಪಡಿಯಚ್ಚನ್ನು ವೊಂದು ಕಲ್ಲಿನೊಳಗೆ ತೂತು ತೆಗಿದು ಅದರೊಳಗೆ ಬಿಗಿಯಾಗಿ ಕೂಡ್ರಿಸಿಟ್ಟಿರುವರು; ಎರಡನೇ ಪಡಿಯಚ್ಚನ್ನು ವೊಂದು ಕಬ್ಬಿಣದ ಕಾಂಪಿನೊಳಗೆ ಕೂಡ್ರಿಸಿರುವರು; ಇವೆರಡೂ ಪಡಿಯಚ್ಚುಗಳು ಬಿರಿಸಾದ ಉಕ್ಕಿನಿಂದ ಮಾಡಿದಂಥವು. ಪಡಿಯಚ್ಚಿನವನು ವೊಂದು ಬೆಳ್ಳಿಯ ಹಲ್ಲಿಯನ್ನು ಕೆಳಗಿನ ಪಡಿಯಚ್ಚಿನ ಮೇಲಿಟ್ಟು, ಯೆರಡನೇದನ್ನು ಅದರ ಮೇಲೆ ಕಾಂವಿನಿಂದ ಯೆಡಗೈಯಲ್ಲಿ ಹಿಡಿದ ಕೂಡಲೆ ಬೇರೊಬ್ಬ ಮನುಷ್ಯನು ವೊಂದೇ ಸುತ್ತಿಗೆಯ ಪೆಟ್ಟನ್ನು ಮೇಲಿನ ಪಡಿಯಚ್ಚಿನ ಮೇಲೆ ಹೊಡಿಯುವನು; ಆ ಕ್ಷಣವೇ ಯೆರಡೂ ಪಡಿಯಚ್ಚುಗಳು ಮೂಡಿ ರೂಪಾಯಿಯು ದೂರ ಹಾರಿ ಹೋಗುವದು; ಆ ಕ್ಷಣವೇ ಪಡಿಯಚ್ಚು ಹಿಡಿದವನು ಬಲಗೈಯಿಂದ ಮತ್ತೊಂದು ಹಲ್ಲಿಯನ್ನು ಕೆಳಗಿನ ಪಡಿಯಚ್ಚಿನ ಮೇಲೆ ಇಡುವನು. ಈ ಪ್ರಕಾರ ಸುಮಾರು ಮೂರು ಮಿನಿಟನೊಳಗೆ ೧೦೦ ರೂಪಾಯಿಗಳನ್ನು ಮುದ್ರಿಸುವರು. ಎರಡೂ ಪಡಿಯಚ್ಚುಗಳ ಆಕಾರವು ರೂಪಾಯಿಯ ಆಕಾರದ ಇಮ್ಮಡಿಯಷ್ಟು ಇರುವದು; ಅವುಗಳಲ್ಲಿ ಫಾರ್ಸೀ ಅಕ್ಷರಗಳಿರುವವು. ಪಡಿಯಚ್ಚುಗಳ ಆಕಾರ ದೊಡ್ಡದು, ರೂಪಾಯಿಯ ಆಕಾರ ಸಣ್ಣದು ಆದ್ದರಿಂದ ಬೇರೆ ಬೇರೆ ರೂಪಾಯಿಗಳ ಮೇಲೆ ಬೇರೆ ಬೇರೆ ಅಕ್ಷರಗಳು ಮೂಡುವವು;

ಯೆಲ್ಲ ಅಕ್ಷರಗಳು ಯಾವ ರೂಪಾಯಿಯ ಮೇಲೆಯೂ ಮೂಡುತ್ತಿದ್ದಿಲ್ಲ. ಬಾಗಲಕೋಟೆಯ ಟಂಕಸಾಲೆಯಿಂದ ಅದರ ಮಾಲಕನಿಗೆ ರೂಪಾಯಿಗೆ ಸುಮಾರು ಅರ್ಧಾ ಆಣೆಯಂತೆ ಲಾಭವಾಗುತ್ತಿತ್ತು.

**ದ್ರವ್ಯಸಂಚಯ.** **ದ್ರವ್ಯಸಂಚಯ.**—ವ್ಯಾಪಾರಸ್ಥರು, ಬಹಳ ಭೂಮಿಯನ್ನು ಮಾಡುವಂಥ ವೊಕ್ಕಲಿಗರು, ಚಿನಿವಾರರು, ವಕೀಲರು, ಮೇಲ್ತರದ ಸರಕಾರೀ ನೌಕರರು, ಕುರುಬರು, ಸಮ್ಮಗಾರರು, ಮುಂತಾದ ಜನರಲ್ಲಿ ದ್ರವ್ಯಸಂಚಯವು ಹೆಚ್ಚಾಗಲಿ ಕಡಿಮೆಯಾಗಲಿ ಆಗುತ್ತಿರುತ್ತದೆ. ದೊಡ್ಡ ದೊಡ್ಡ ಇನಾಮದಾರರಲ್ಲಿ ಸ್ವಲ್ಪ ಜನರನ್ನು ದೈವುಳ್ಳವರನ್ನು ಕಾಣ ಬಹುದು. ಆದರೆ ಇನಾಮದಾರಿಗೆ ಯೇನು ಶ್ರಮ ಮಾಡದೆ ಕೂತಲ್ಲೇ ಬಹಳ ಹಣವು ಕೈಗೆ ಬರುತ್ತಿರುವ ಕಾರಣ ದುಡ್ಡಿನ ಬೆಲೆಯು ಅವರಿಗೆ ತಿಳಿಯುವದಿಲ್ಲ. ಆದ್ದರಿಂದ ಅವರ ಮನೆತನದ ವೆಚ್ಚವು ಬಹಳ ಅಸ್ತವ್ಯಸ್ತ ಇರುತ್ತದೆ. ಲಗ್ನ ಮುಹೂರ್ತಗಳಿಗಾಗಿ ಸಾಲ ಮಾಡದಂಥ ಇನಾಮದಾರರು ಬಹು ಸ್ವಲ್ಪ ಜನರುಂಟು.

ಉತ್ತಮ ಕುಲದ ಹಿಂದೂ ಜನರು ಯೆಲ್ಲ ವಿಧದ ವ್ಯಾಪಾರ ಮಾಡುತ್ತಾರೆ. ಇಂಥವರು ಇಂಥಾ ವ್ಯಾಪಾರ ಮಾಡ ತಕ್ಕವರೆಂಬ ನಿರ್ಬಂಧವಿಲ್ಲ. ಎಲ್ಲಕ್ಕೂ ಮೊದಲು ಬಡ್ಡಿಯ ವ್ಯಾಪಾರಕ್ಕೆ ಬಹು ಜನರು ಹವಣಿಸುತ್ತಾರೆ. ಯಾಕಂದರೆ ಅದಕ್ಕೆ ಶ್ರಮ ಮಾಡುವ ಪ್ರಯೋಜನವಿಲ್ಲ, ಇದ್ದಷ್ಟು ಹಣದಿಂದ ವ್ಯಾಪಾರ ಸಾಗುತ್ತದೆ, ಲೆಕ್ಕ ಪತ್ರದ ಗೊಂದಲವಿಲ್ಲ, ಬಹಳ ಬುದ್ಧಿಯನ್ನು ಹಾಕುವ ಪ್ರಯೋಜನವಿಲ್ಲ, ಸಾಲ ಬೇಡುವ ಗಿರಾಕಿಗಳು ಹೇರಳವಾಗಿ ದೊರಿಯುತ್ತವೆ. ಆದರೆ ದೊಡ್ಡ ಗ್ರಾಮಗಳಲ್ಲಿ ಇರುವ ಬಣಜಿಗರು, ಕೊಮಟಿಗರು, ನಾರ್ವೇಕರರು, ಗುಜ್ಜರು, ಮುಂತಾದವರು ಚಿಕ್ಕ ತಕ್ಕಡೀ ಅಂಕಡಿಯನ್ನು ಹಚ್ಚುವದು ಬಹಳ. ಬ್ರಾಹ್ಮಣರು ಹೆಚ್ಚಾಗಿ ಬಡ್ಡಿ, ಬೆಳ್ಳಿ ಬಂಗಾರಗಳ ಮಾರಾಟ, ಹುಂಡಿ, ಅರಿವೆಯ ಅಂಗಡಿ, ಮುಂತಾದ ಕೂತಲ್ಲೇ ನಡಿಯುವಂಥ ವ್ಯವಹಾರಗಳನ್ನು ಮಾಡುವರು. ಆದರೆ ಮದ್ಯ ಮಾಂಸಗಳ ವಿಕ್ರಯ, ಯಾವದಾದರೂ ಬಗೆಯ ಚರ್ಮದ ವ್ಯಾಪಾರ, ನೆಣದ ಮಾರಾಟ, ಇಂಥಾ ನೀಚತನದ ವ್ಯಾಪಾರಗಳನ್ನು ಉತ್ತಮ ಕುಲದವರು ಮಾಡುವದಿಲ್ಲ.

**ಸಂಚಿತದ ಉಪಯೋಗ.**—ಸಾಲ ಕೊಡುವದು, ವ್ಯಾಪಾರ, ಭೂಮಿ ಮನೆಗಳನ್ನು ಕೊಳ್ಳುವದು, ಆಭರಣಗಳನ್ನು ಮಾಡಿಸುವದು, ಇವೇ ಹಣವನ್ನು ಉಪಯೋಗಿಸುವ ಮುಖ್ಯ ಮಾರ್ಗಗಳು. ಆಭರಣಗಳಲ್ಲಿ ಯೆಲ್ಲಕ್ಕೂ ಹೆಚ್ಚು ದುಡ್ಡು ತೊಡಕುತ್ತದೆ. ಬಳಿಯಲ್ಲಿ ನೂರು ರೂಪಾಯಿ ಶಿಲಕು ಉಳಿದರೆ, ಅದರಲ್ಲಿ ಅರ್ಧಕ್ಕರ್ಧ ಹಣ ಆಭರಣಗಳಲ್ಲಿ ಹಾಕುವವರೇ ಬಹು ಜನರು. ಇನಾಮದಾರರೂ ಸರಕಾರೀ ನೌಕರರೂ ವಕೀಲರೂ ತಮ್ಮ ಬಳಿಯಲ್ಲಿಯ ಬಹುತರ ಯಾವತ್ತು ಹಣವನ್ನು ಆಭರಣಗಳಲ್ಲಿಯೇ ಹಾಕುತ್ತಾರೆಂದು ಹೇಳ ಬಹುದು. ಈ ಜನರೊಳಗೆ ಆದಾಯದ ವ್ಯವಸಾಯಗಳಲ್ಲಿ ಹಣ ಹಾಕುವಂಥವನು ಹತ್ತರಲ್ಲಿ ವೊಬ್ಬ ದೊರಿಯುವದು ದುರ್ಲಭವು. ಸರಕಾರೀ

ಬ್ಯಾಂಕಿನಲ್ಲಿ ಹಣ ಇಡುವವರು ಬಹು ಸ್ವಲ್ಪ ಜನರು. ಸರಕಾರೀ ನೌಕರರೂ ವಕೀಲರೂ ಮಾತ್ರ ಕ್ವಚಿತ್ತಾಗಿ ಬ್ಯಾಂಕಿನಲ್ಲಿ ಹಣ ಇಡುತ್ತಾರೆ. ಒಕ್ಕಲಿಗನ ಮನೆಯಲ್ಲಿ ದುಡ್ಡು ಹೆಚ್ಚಾದರೆ ಅವನು ಅದನ್ನು ನೆಲದೊಳಗೆ ಹೂಳಿಡುವನು. ಹೆಂಗಸರ ಕೈಶೇರಿದ ಹಣವಾದರೂ ಇದೇ ಗತಿಯಾಗುತ್ತದೆ. ಹಣವನ್ನು ಹೂಳಿಡುವ ನಡಾವಳಿಯು ಯಾವತ್ತು ಜಾತಿಗಳಲ್ಲಿ ಇರುತ್ತದೆಂದು ಹೇಳ ಬಹುದು. ಆದರೂ ಈ ನಡಾವಳಿಯು ಸುದೈವದಿಂದ ದಿನ ದಿನಕ್ಕೆ ಕಡಿಮೆಯಾಗುತ್ತ ನಡಿದದೆ. ಕಾನಡಾ ಜಿಲ್ಲೆಯಲ್ಲಿ ಡೋಣಿಗಳಲ್ಲಿ ಹಣ ಹಾಕಿ ಬಾಡಿಗೆಯ ಉದ್ಯೋಗವನ್ನು ಬಹು ಜನರು ಮಾಡುತ್ತಾರೆ. ಮೀನ ಹಿಡಿಯುವ ಬಡ ಜಾತಿಗಳ ಜನರು ಅಲ್ಪ ಸ್ವಲ್ಪ ಹಣದಿಂದ ಸಣ್ಣ ಸಣ್ಣ ಡೋಣಿಗಳನ್ನು ಕೊಂಡು ಮೀನ ಹಿಡಿಯುವ ಹೋರೆ ಮಾಡುವರು. ಕಂಪನಿಗಳನ್ನು ಮಾಡಿ, ಬಹು ಜನರ ಹಣ ಪೊಟ್ಟುಗೂಡಿಸಿ, ವ್ಯವಹಾರ ಮಾಡುವ ನಡಾವಳಿಯು ಬಹುತರ ಇಲ್ಲವೇ ಇಲ್ಲೆಂದು ಹೇಳ ಬಹುದು. ಇತ್ತಿತ್ತಲಾಗಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಇಂಥಾ ದೊಡ್ಡ ಗ್ರಾಮಗಳಲ್ಲಿ ವ್ಯಾಪಾರಸ್ಥರ ಕಂಪನಿಗಳು ಅಲ್ಪ ಸ್ವಲ್ಪವಾಗಿ ತಲೆದೊರ ಹತ್ತಿರುತ್ತವೆ.

ಸಾಲ ಕೊಡುವದೂ, ಬಡ್ಡಿಯೂ.—ಲೈಸೆನ್ಸ ಟ್ಯಾಕ್ಸ ಯೆಂಬ ಸರಕಾರಿ ತೆರಿಗೆಯ ಲೆಕ್ಕದಿಂದ ನೋಡಲಾಗಿ, ಪೊಟ್ಟು ತೆರಿಗೆಯಲ್ಲಿ ಶೇಕಡಾ ೭೫ರಂತೆ ಹಣವು ಬಡ್ಡಿಯ ವ್ಯವಹಾರ ಮಾಡುವವರಿಂದ ವಸೂಲಾಗುತ್ತದೆಂದು ತಿಳಿದದೆ. ಈ ವ್ಯವಹಾರ ಮಾಡುವ ಜನರು ನೂರರಲ್ಲಿ ಸುಮಾರು ४೦ ಜನರು ದೊಡ್ಡ ಗ್ರಾಮಗಳಲ್ಲಿ ೬೦ ಜನರು ಹಳ್ಳಿಗಳಲ್ಲಿ ಇರುತ್ತಾರೆ. ಬಡ್ಡಿಗೆ ಹಣ ಕೊಡುವ ಜನರಲ್ಲಿ ಮಾರವಾಡಿಗಳು ಪರಮಾವಧಿಯ ಮನೆಮುರಕರೆಂದು ಹೆಸರಾಗಿದ್ದಾರೆ. ಅವರ ಕೆಳಗೆ ಗುಜ್ಜರನ್ನು ಯೆಣಿಸ ಬಹುದು. ಹತ್ತೆಂಟು ರೂಪಾಯಿಯ ಗಂಟು ಕೈಯಲ್ಲಿ ಮಾಡಿ ಕೊಂಡು ಕೆಲವೊಂದು ಹಳ್ಳಿಯಲ್ಲಿ ಅಂಗಡಿ ಹಚ್ಚಿಕೊಂಡು ಕೂತಂಥ ಮಾರವಾಡಿಯು ಹತ್ತೆಂಟು ವರ್ಷದೊಳಗೆ ದೊಡ್ಡ ಸಾವಕಾರನೆನಿಸಿ ಕೊಳ್ಳುತ್ತಾನೆ. ಬಡ್ಡಿಯ ದರವು ಸ್ಥಳ, ಸಾಲ ತಕ್ಕೊಳ್ಳುವ ಮನುಷ್ಯನ ಯೋಗ್ಯತೆ, ಪೊತ್ತಿ ಇಟ್ಟ ಪೊಡವೆ, ಸಾಲ ತಕ್ಕೊಂಡ ರಕಮು, ಇವುಗಳ ಮಾನದಿಂದ ಹೆಚ್ಚು ಕಡಿಮೆ ಇರುತ್ತದೆ. ಶಹಾಪುರದಂಥ ದೊಡ್ಡ ದೊಡ್ಡ ವ್ಯವಹಾರದ ಗ್ರಾಮದಲ್ಲಿ ಬಂಗಾರದ ಗಟ್ಟಿ ದಾಗೀನಗಳನ್ನು ಪೊತ್ತಿ ಇಟ್ಟು ಬಹಳ ಹಣ ತಕ್ಕೊಂಡರೆ ಶೇಕಡಾ ತಿಂಗಳಿಗೆ ೪, ೫ ಆಣೆಯಂತೆ ಬಡ್ಡಿಯಿಂದ ಹಣ ದೊರಿಯುತ್ತದೆ. ಆದರೆ ವಾಡಿಕೆಯಾಗಿ ಇಂಥಾ ದಾಗೀನಗಳನ್ನು ಪೊತ್ತಿ ಇಟ್ಟು ಹಣ ತಕ್ಕೊಳ್ಳುವವರು ತಿಂಗಳಿಗೆ ಶೇಕಡಾ ೮ರಿಂದ ೧೦ ಆಣೆಯಂತೆ ಬಡ್ಡಿಯನ್ನು ಯೆಲ್ಲ ಕಡೆಯಲ್ಲಿ ಕೊಡುತ್ತಾರೆ. ಸ್ವಲ್ಪ ಹಣ ತಕ್ಕೊಂಡರೆ ಬಡ್ಡಿ ಹೆಚ್ಚು, ಬಹಳ ತಕ್ಕೊಂಡರೆ ಕಡಿಮೆ; ಮೈನಂಬಿಗೆಯ ಸಾಲಕ್ಕೆ ಬಡ್ಡಿ ಹೆಚ್ಚು, ಪೊತ್ತಿಯ ಸಾಲಕ್ಕೆ ಕಡಿಮೆ; ಅದರಲ್ಲಿ ಪೊತ್ತಿಯ ಬದುಕು ಬೆಲೆಯುಳ್ಳದಿದ್ದಂತೆ ಬಡ್ಡಿ ಕಡಿಮೆ; ಬೆಲೆ ಕಡಿಮೆ ಇದ್ದಂತೆ ಬಡ್ಡಿ ಹೆಚ್ಚು; ಹಳ್ಳಿಯಲ್ಲಿ ಬಡ್ಡಿ ಹೆಚ್ಚು, ದೊಡ್ಡ ಗ್ರಾಮಗಳಲ್ಲಿ ಕಡಿಮೆ; ಸಾಲ ತಕ್ಕೊಳ್ಳುವ ಮನುಷ್ಯನು ಆಸ್ತಿಯುಳ್ಳವನೂ,

ಪ್ರಮಾಣಿಕನೂ ಇದ್ದರೆ ಬಡ್ಡಿ ಕಡಿಮೆ, ಬಡವನಿದ್ದರೆ ಹೆಚ್ಚು. ಅಪ್ರಮಾಣಿಕನಾದ ಬಡವನಿಗೆ ಯಾರೂ ಸಾಲ ಕೊಡುವದಿಲ್ಲ. ಮೇಲೆ ಹೇಳಿದಂತೆ ಗಟ್ಟಿ ಬಂಗಾರದ ದಾಗೀನಗಳ ಮೇಲೆ ಬಡ್ಡಿ ಬಹಳ ಕಡಿಮೆ ಬೀಳುತ್ತದೆ; ಭೂಮಿಯನ್ನು ವೊತ್ತೀ ಹಾಕುವವನಿಗೆ ವಾಡಿಕೆಯಾಗಿ ಶೇಕಡಾ ವೊಂದರಂತೆ ಬಡ್ಡಿ ಬೀಳುತ್ತದೆ. ಆದರೆ ಹತ್ತು, ಇಪ್ಪತ್ತು, ಐವತ್ತರ ವರೆಗೆ ಸಾಲ ತಕ್ಕೊಳ್ಳುವವರು ವೊತ್ತಿಯ ಮೇಲೆ ರೂಪಾಯಿಗೆ ದುಡ್ಡಿನಂತೆ ಬಡ್ಡಿಯನ್ನು ಕೊಡುವರು. ಇಂಥಾ ಸಣ್ಣ ಪುಟ್ಟ ಸಾಲವನ್ನು ವೈನಂಬಿಗೆಯಿಂದ ತಕ್ಕೊಳ್ಳುವವನಿಗೆ ರೂಪಾಯಿಗೆ ಯೆರಡು ದುಡ್ಡಿಗಿಂತ ಕಡಿಮೆ ಬಡ್ಡಿಯ ಸಾಲವು ಬಹುತರ ದೊರಿಯುವದಿಲ್ಲ; ಆತುರರಾದವರು ಮೂರು ದುಡ್ಡಿನಂತೆ, ಆಣೆಯಂತೆ ಸಹ ಬಡ್ಡಿಯನ್ನು ಕೊಡುವರು. ಈ ದುಡ್ಡಿನ ಲೆಕ್ಕದ ಬಡ್ಡಿಯ ವ್ಯವಹಾರವು ಹೆಚ್ಚಾಗಿ ಹಳ್ಳಿಗಳಲ್ಲಿ ನಡಿಯುತ್ತದೆ. ಕಾನಡಾ ಜಿಲ್ಲೆಯಲ್ಲಿ ಬಡ್ಡಿಯ ದರವು ಶೇಕಡಾ ಯೆರಡಕ್ಕಿಂತ ಹೆಚ್ಚು ಇರುವದಿಲ್ಲ; ಉಳಿದ ಕಡೆಯಲ್ಲಿ ಮೂರರ ವರೆಗೆ ಇರುತ್ತದೆ.

ಸಾಲ ತಕ್ಕೊಳ್ಳುವವರು.—ಅಲ್ಪ ಸ್ವಲ್ಪ ಭೂಮಿಯನ್ನು ಮಾಡುವಂಥ ವೊಕ್ಕಲಿಗರೇ ಈ ಶೀಮೆಯಲ್ಲಿ ಸಾಲ ತಕ್ಕೊಳ್ಳುವ ಮುಖ್ಯ ಕುಳಗಳುಂಟು. ಒಕ್ಕಲಿಗರಲ್ಲಿ ನೂರರಲ್ಲಿ ೭೫ ಜನರಿಗೆ ಸಾಲವಿರುತ್ತದೆಂದು ಹಿಂದಿನ ಭಾಗದಲ್ಲಿ ಹೇಳಿದ್ದೇವೆ; ಸಾಲದ ಕಾರಣವನ್ನಾದರೂ ಅಲ್ಲೇ ತಿಳಿಸಿದ್ದೇವೆ. ಬಡ ವೊಕ್ಕಲಿಗನಿಗೆ ಮಾರವಾಡಿಯು ಗಂಟು ಬಿದ್ದನೆಂದರೆ ತೀರಿತು; ಹತ್ತೆಂಟು ವರ್ಷದೊಳಗೆ ವೊಕ್ಕಲಿಗನ ಬದುಕೆಲ್ಲ ಭೂಮಿ ಸಹಿತ ಮಾರವಾಡಿಯ ಮನೆ ಶೇರುತ್ತದೆ. ಒಕ್ಕಲಿಗರಿಗೆ ಸಾಲ ಕೊಡುವವರೆಲ್ಲರು ವಾಡಿಕೆಯಾಗಿ ಅವರ ಭೂಮಿಯನ್ನು ಕಸುಕೊಳ್ಳಲಿಕ್ಕೆ ಹವಣಿಸುತ್ತಿರುತ್ತಾರೆ. ಮೊದಲು ನಾಲ್ಕೆಂಟು ರೂಪಾಯಿ ಸಾಲವನ್ನು ಸಾವಕಾರನು ವೊಕ್ಕಲಿಗನಿಗೆ ವೈನಂಬಿಗೆಯಿಂದ ಕೊಡುವನು. ಅದರ ಬಡ್ಡಿ ರೂಪಾಯಿಗೆ ತಿಂಗಳಿಗೆ ಯೆರಡು ದುಡ್ಡಿಗಿಂತ ಕಡಿಮೆ ಇರುವದಿಲ್ಲ. ಈ ಸಾಲದ ಬಡ್ಡಿ ವರ್ಷ ಯೆರಡು ವರ್ಷ ಯೇರಿತೆಂದರೆ, ವೊಕ್ಕಲಿಗನಿಗೆ ತಗಾದೆ ಮಾಡಿ, ಬಡ್ಡಿ ಗಂಟು ಕೂಡಿ ಆದ ರಕಮಿಗಾಗಿ ಸಾವಕಾರನು ಹೊಸ ಕಾಗದ ಮಾಡಿಸಿಕೊಳ್ಳುವನು; ಆ ಕಾಗದದಲ್ಲಿ ಭೂಮಿಯನ್ನು ವೊಕ್ಕಲಿಗನು ಅಡವು ಹಚ್ಚಿ ಕೊಡುತ್ತಾನೆ. ಆ ಭೂಮಿಯ ಹುಟ್ಟುವಳಿಯಲ್ಲಿ ಸುಮಾರು ಅರ್ಧ ಪಾಲು ಸಾವಕಾರನ ಬಡ್ಡಿಗೆ ಪೋಗುತ್ತದೆ. ಒಕ್ಕಲಿಗನ ಹೊಟ್ಟೆಗೂ, ಬೀಜಕ್ಕೂ, ದನಕರ ಕೊಳ್ಳಲಿಕ್ಕೂ, ಲಗ್ನ ಮುಂತಾದ ಕಾರ್ಯಗಳಿಗೂ ಹಣ ಬೇಕಾದರೆ, ಅವನು ಅದೇ ಸಾವಕಾರನ ಬಳಿಯಲ್ಲಿ ಅದೇ ಭೂಮಿಯ ಮೇಲೆ ಮತ್ತೆ ಸಾಲ ತೆಗೆಯುತ್ತಾನೆ. ಹೀಗಾಗಿ ಕೆಲವು ವರ್ಷ ವ್ಯವಹಾರ ನಡಿದ ಬಳಿಕ ಸಾವಕಾರನ ದುಡ್ಡು ವೊಕ್ಕಲಿಗನ ಕೈಯಿಂದ ನೀಗದಷ್ಟು ಆಯಿತೆಂದರೆ, ಅವನು ಕೋರ್ಟಿನಲ್ಲಿ ದಾವೇ ಮಾಡಿ ಭೂಮಿಯನ್ನು ಮಾರಿಸಿ ತಾನೇ ಭೂಮಿಯ ವೊಡಿಯನಾಗುತ್ತಾನೆ; ಒಕ್ಕಲಿಗನು ಕೂಲಿಕಾರರೊಳಗೆ ಶೇರುತ್ತಾನೆ. ಈ ಬಗೆಯಾಗಿ ಸಾವಕಾರರ ಸಾಲಕ್ಕಾಗಿ ಭೂಮಿಯ ವಿಕ್ರಯವು ಬಹಳ ಆಗುತ್ತದೆ. ಒಕ್ಕಲಿಗರು ತಾವೇ ತಮ್ಮ ಇಚ್ಛೆಯಿಂದ ಭೂಮಿಯನ್ನು ಮಾರುವದು, ಇಲ್ಲವೆ ಸರಕಾರೀ

ತೆರಿಗೆಗಾಗಿ ಭೂಮಿಯನ್ನು ಮಾರುವದು ಬಹು ಕಡಿಮೆ. ಒಕ್ಕಲಿಗರ ಕೆಳಗೆ ಸಾಲ ಮಾಡುವ ಜನರು ಇನಾಮದಾರರೆಂದು ಹೇಳ ಬಹುದು. ಆದರೆ ಇನಾಮದಾರರ ಭೂಮಿಯು ಸಾವಕಾರರ ಮನೆ ಶೇರಲಿಕ್ಕೆ ಕಾಯಿದೆಯಿಂದ ಪ್ರತಿಬಂಧವಿರುವ ಕಾರಣ ಇನಾಮದಾರರಿಗೆ ವೊಕ್ಕಲಿಗರಷ್ಟು ಬೇಗ ಬಡತನ ಬರುವದಿಲ್ಲ. ಇನಾಮದಾರರ ಮನೆಯಲ್ಲಿಯ ಆಸ್ತಿಯನ್ನೆಲ್ಲ ಅಪಹರಿಸಿದ ಬಳಿಕ ಸಾವಕಾರರು ಅವರ ಭೂಮಿಗೆ ಕೈ ಹಾಕುವರು. ಆ ಭೂಮಿಯ ವೊಡೆತನವು ಸಾವಕಾರನ ಕೈ ಶೇರದಿದ್ದಾಗ್ಯೂ, ಬಡ್ಡಿಯಲ್ಲಿ ಆ ಭೂಮಿಯನ್ನು ಅವನು ವೊಡಿಯನಂತೆಯೇ ವಂಶ ಪರಂಪರೆಯಾಗಿ ಉಣ್ಣುವನು. ವ್ಯಾಪಾರಸ್ಥರು ಸಹ ಸಾಲ ಮಾಡುವದುಂಟು. ಆದರೆ ಅವರ ಪತ್ತು ವೊಳಿತಾಗಿ ಇರುವದರಿಂದ ಅವರ ಸಾಲದ ಬಡ್ಡಿಯ ದರವು ಹಗುರಾದದ್ದಿರುತ್ತದೆ. ಬಡಿಗಿ, ಕಮ್ಮಾರ, ಉಪ್ಪಾರ, ಕುಂಬಾರ, ಮುಂತಾದ ಕೈಗಾರಿಕೆಯ ಜನರು ಸಾಲ ಮಾಡುವ ಪ್ರಯೋಜನವು ಬಹುತರ ಬೀಳುವದಿಲ್ಲ. ಲಗ್ನ ಕಾರ್ಯ ಮುಂತಾದ ಕಾರಣದಿಂದ ಅವರು ಸಾಲ ಮಾಡಿದರೆ ಅದನ್ನು ತೀರಿಸುವ ಸಾಮರ್ಥ್ಯವು ಅವರಿಗಿರುತ್ತದೆ. ಅವರ ಸಾಲದ ಬಡ್ಡಿಯಾದರೂ ಅಪರಿಮಿತವಾದದ್ದಿರುವದಿಲ್ಲ. ಕೂಲಿಕಾರರ ಬಳಿಯಲ್ಲಿ ಆಸ್ತಿ ಯೇನು ಇರುವದಿಲ್ಲಾದ್ದರಿಂದ ಅವರಿಗೆ ಸಾಲವನ್ನು ಕೊಡುವವರು ಬಹು ಕಡಿಮೆ. ಆದರೆ ಕೂಲಿಕಾರರ ಸ್ಥಿತಿಯು ದಿನದಿನಕ್ಕೆ ಸುಧಾರಿಸುತ್ತ ನಡಿದದೆ. ಮನೆಯಲ್ಲಿ ಗಂಡ, ಹೆಂಡತಿ, ಇಬ್ಬರಿದ್ದರೆ, ಇಬ್ಬರೂ ಕೂಡಿ ಸುಗ್ಗಿಯ ಕಾಲದಲ್ಲಿ ಸುಮಾರು ಆರು ತಿಂಗಳಿನ ಗ್ರಾಸವನ್ನು ಸಂಪಾದಿಸುತ್ತಾರೆ. ಬಿಡಿ ದಿವಸಗಳಲ್ಲಿ ಇಬ್ಬರೂ ಕೂಲಿಗೆ ಹೋಗುವರು. ಹಳ್ಳಿಗಳಲ್ಲಿ ಬಿಡಿ ದಿವಸಗಳಲ್ಲಿ ಕೂಲಿಕಾರರಿಗೆ ಕೂಲಿ ದೊರಿಯುವದಿಲ್ಲಾದ್ದರಿಂದ ಅವರು ಸಮೀಪದಲ್ಲಿ ಇರುವ ದೊಡ್ಡ ಊರಿಗೆ ಹೋಗಿ ಕೂಲಿಯ ಕೆಲಸವನ್ನು ಸಂಪಾದಿಸುವರು. ಈ ಶೀಮೆಯಲ್ಲಿ ಹೊಗೆಬಂಡಿ ಬರುವ ಪೂರ್ವದಲ್ಲಿ ಕೂಲಿಯ ದರವು ಗಂಡಸರಿಗೆ ಮೂರು, ಮೂರುವರೆ ಆಣೆ, ಹೆಂಗಸರಿಗೆ ೨ ಆಣೆ ದರವಿತ್ತು. ಆದರೆ ಈಗ (೧೮೯೧) ನಾಲ್ಕು ಆಣೆಗಿಂತ ಕಡಿಮೆ ಕೂಲಿಗೆ ಗಂಡಸು, ಯೆರಡೂವರೆ ಆಣೆಗಿಂತ ಕಡಿಮೆ ಕೂಲಿಗೆ ಹೆಂಗಸು ದೊರಿಯುವದಿಲ್ಲ. ದೊಡ್ಡ ಗ್ರಾಮಗಳಲ್ಲಿ ೫, ೬ ಆಣೆಯ ವರೆಗೂ ದಿನಗೂಲಿಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಕೂಲಿಕಾರರು ಕಡಿಮೇ ಪ್ರತಿಯ ವೊಕ್ಕಲಿಗರಿಗಿಂತ ವಾಡಿಕೆಯಾಗಿ ಹೆಚ್ಚು ಸುಖದಿಂದ ಇದ್ದಾರೆಂದು ಹೇಳ ಬಹುದು.

ಜೀತ.

ಜೀತ ಅಥವಾ ಮುಡಿತದ ವೊತ್ತಿ.—ಕೂಲಿಕಾರರಿಗೂ ಕಡಿಮೇ ಪ್ರತಿಯ ವೊಕ್ಕಲತನದವರಿಗೂ ಲಗ್ನ ಮುಂತಾದ ಕಾರ್ಯಗಳಿಗಾಗಿ ಹಣ ಬೇಕಾದರೆ, ಅವರ ಬಳಿಯಲ್ಲಿ ವೊತ್ತೀ ಇಡಲಿಕ್ಕೆ ವೊಡವೆಗಳೇನು ಇರುವದಿಲ್ಲಾದ ಕಾರಣ ಅವರು ಸಾವಕಾರರಲ್ಲಿ ತಾವೇ ಆಳಾಗಿ ದುಡಿಯುವ ಕರಾರಿನಿಂದ ಸಾಲ ತೆಗಿಯುವರು. ಕಡಿಮೇ ಪ್ರತಿಯ ವೊಕ್ಕಲತನದವನು ತನ್ನ ಮಗನನ್ನಾಗಲಿ ತಮ್ಮನನ್ನಾಗಲಿ ದುಡಿಯಲಿಕ್ಕೆ ಸಾವಕಾರನ ಮನೆಯಲ್ಲಿ ಇಡುವನು. ಈ ಬಗೆಯ ವೊತ್ತಿಯ ಆಳುಗಳನ್ನು ವಿಶೇಷವಾಗಿ ಮೇಲ್ತರದ ವೊಕ್ಕಲಿಗರು ಇಟ್ಟುಕೊಳ್ಳು

ವರು; ಕೊಡ ಕೊಳ್ಳುವ ವ್ಯವಹಾರ ಮಾಡುವವರೂ ಬೇರೆ ಜನರೂ ಇಟ್ಟುಕೊಳ್ಳುವ ರೂಢಿ ಅಷ್ಟಿಲ್ಲ. ಜೀತದವನು ೧೦೦ ರೂಪಾಯಿ ಸಾಲ ತಕ್ಕೊಂಡರೆ, ಅವನಿಗೆ ಸಾವಕಾರನು ಕೂಳು ಬಟ್ಟೆಗಳನ್ನು ಕೊಟ್ಟು ವಾಡಿಕೆಯಾಗಿ ೫ ವರ್ಷ ದುಡಿಸಿ ಕೊಂಡು ಸಾಲ ತೀರಿಸಿ ಕೊಳ್ಳುವನು. ಜೀತದ ಆಳಿಗೆ ದಿನಕ್ಕೆ ಮೂರು ಸಾರಿ ಊಟ ಹಾಕಿ ವರ್ಷಕ್ಕೆ ೧ ಕಂಬಳಿ, ೧ ಕಾಲಮರೀ ಜೋಡು, ೧ ವಲ್ಲಿಯ ಜೋಡು, ೨ ಪಂಜೆಗಳು ಇಲ್ಲವೆ ಚಣ್ಣ, ೧ ರುಮಾಲ, ೧ ಅಂಗಿ, ಇಷ್ಟು ವಸ್ತ್ರಗಳನ್ನು ಕೊಡುವರು. ಅನ್ನ ವಸ್ತ್ರಗಳ ಕರಾರು ಇಲ್ಲದಿದ್ದರೆ, ಸುಮಾರು ಮೂರು ವರ್ಷದೊಳಗೆ ಸಾಲ ತೀರುತ್ತದೆ. ಕಾನಡಾ ಜಿಲ್ಲೆಯಲ್ಲಿ ನೂರು ರೂಪಾಯಿಗಾಗಿ ಅನ್ನ ವಸ್ತ್ರ ಕೊಟ್ಟು ೪ ವರ್ಷ, ಪೊಣಜೀತ ೨ ವರ್ಷ ಕರಾರು ಮಾಡುವರು. ಈ ಪ್ರಕಾರ ಸಾಲದಲ್ಲಿ ದುಡಿಯುವ ಕರಾರಿನಿಂದ ಹೆಂಗಸರು ಜೀತ ನಿಲ್ಲುವ ನಡಾವಳಿಯು ಈ ಶೀಮೆಯಲ್ಲಿ ಇಲ್ಲ. ಜೀತದ ಮುದ್ದತಿನೊಳಗೆ ಸಾಲ ಕೊಟ್ಟವನು ತೀರಿದರೆ ಅವನ ವಾರಸದಾರರು ದುಡಿಸಿ ಕೊಳ್ಳುವರು. ಆದರೆ ಜೀತದವನು ಮುದ್ದತಿನೊಳಗೆ ತೀರಿದರೆ ಅವನ ವಾರಸದಾರರು ದುಡಿಯಲಿಕ್ಕೆ ಬೇಕೆಂಬ ನಿರ್ಬಂಧವಿರುವದಿಲ್ಲ; ಸಾವಕಾರನ ಹಕ್ಕು ಉಳಿದ ದುಡ್ಡಿನ ಪೂರ್ತಿಗೆ ಮಾತ್ರ ನಡಿಯುವದು. ಜೀತದವನು ಮುದ್ದತಿನೊಳಗೆ ದುಡಿಯುವದನ್ನು ಬಿಟ್ಟರೆ, ಸಾವಕಾರನು ಫಿರ್ಯಾದಿ ಮಾಡಿ ತನ್ನ ಹಣ ವಸೂಲ ಮಾಡಿ ಕೊಳ್ಳುವನು; ದುಡಿಸಿ ಕೊಳ್ಳುವ ಹಕ್ಕು ಕೋರ್ಟಿನಲ್ಲಿ ಬಹುತರ ನಡಿಯುವದಿಲ್ಲ. ಒಂದು ಸಾಲದಲ್ಲಿ ದುಡಿಯುತ್ತಿರುವಾಗ ಮತ್ತೆ ಸಾಲ ತಕ್ಕೊಂಡರೆ ಜೀತದ ಮುದ್ದತು ಬೆಳಿಯುತ್ತದೆ; ಈ ಬಗೆಯಾಗಿ ೧೦, ೨೦ ವರ್ಷ ದುಡಿಯುವಂಥ ಆಳುಗಳನ್ನು ಕಾಣ ಬಹುದು. ಒಕ್ಕಲತನದವರು ವಾಡಿಕೆಯಾಗಿ ತಮ್ಮ ಕುಲದವರನ್ನೇ ಜೀತ ಇಟ್ಟು ಕೊಳ್ಳುವರು. ಅದರಿಂದ ಅಡಿಗೆ ನೀರುಗಳಿಗೆ ಸಹ ಜೀತದವರು ನೆರವಾಗಲಿಕ್ಕೆ ಅನುಕೂಲವಾಗುತ್ತದೆ. ವಾಡಿಕೆಯಾಗಿ ೧೦ ವರ್ಷದಿಂದ ೨೦ ವರ್ಷದ ವರೆಗೆ ವಯಸ್ಸುಳ್ಳ ಪ್ರಾಯಸ್ಥರನ್ನೇ ವೊಕ್ಕಲಿಗರು ಜೀತ ಇಟ್ಟುಕೊಳ್ಳುವರು. ಅವರು ಹಗಲು ರಾತ್ರಿ ವೊಡಿಯನ ಮನೆಯಲ್ಲಿ ನಿಂತು ಬಿದ್ದ ಕೆಲಸವನ್ನು ಮಾಡಲಿಕ್ಕೆ ಬೇಕು. ವೊಕ್ಕಲಿಗನಿಗೆ ಗಂಡು ಮಕ್ಕಳಿಲ್ಲದಿದ್ದರೆ, ಅವನು ಜೀತದ ಆಳಿಗೆ ತನ್ನ ಮಗಳನ್ನು ಕೊಟ್ಟು ಮನೆಯ ಅಳಿಯನನ್ನು ಮಾಡಿ ಕೊಳ್ಳುವನು. ಆದರೆ ವೊಳಗಡೆಯಲ್ಲಿ ಕೂಲಿಕಾರರಿಗೆ ಕೂಲಿಯು ವೊಳಿತಾಗಿ ದೊರಿಯುತ್ತಿರುವ ಕಾರಣ ಈ ಜೀತದ ನಡಾವಳಿಯು ದಿನ ದಿನಕ್ಕೆ ಕಡಿಮೆಯಾಗುತ್ತ ನಡಿದದೆ.

ಕೂಲಿ.

ಕೂಲಿ.—ಪೇಶವಾಯಿಯ ಕಡೆಯಲ್ಲಿ, ಅಂದರೆ ಸನ್ ೧೮೨೦ರ ಸುಮಾರಿನಲ್ಲಿ, ದೇಶದಲ್ಲಿ ಧಾನ್ಯವು ಬಹಳ ಅಗ್ಗವಿತ್ತು, ಕೂಲಿಕಾರರಿಗೆ ಸುಗ್ಗಿಯ ಹೊರ್ತು ಕೂಲಿ ದೊರಿಯುವದು ಅಪರೂಪವಾಗಿತ್ತು. ಆ ಕಾಲಕ್ಕೆ ಗಂಡಸಿನ ಕೂಲಿ ೫, ೬ ದುಡ್ಡಿಗಿಂತ ಹೆಚ್ಚಿದ್ದಿಲ್ಲ; ಹೆಂಗಸು ೧ ಆಣೆ ಕೊಟ್ಟರೆ ಸಂಜೆಯ ವರೆಗೆ ದುಡಿಯುವಳು. ಉಪ್ಪಾರ, ಬಡಿಗಿ, ಕಮ್ಮಾರ, ಇವರ ಕೂಲಿಯು ಆ ಕಾಲಕ್ಕೆ ದಿನಕ್ಕೆ ೩, ೪ ಆಣೆಗಿಂತ ಹೆಚ್ಚು ಇದ್ದಿಲ್ಲ. ಅದೇ ಈಗ ಯಾವತ್ತು

ಸ್ಥಿತಿಯು ಬದಲಾಗಿ ಹೋಗಿದೆ. ಕೂಲಿಕಾರರಿಗೂ ಬಡಿಗಿ, ಕಮ್ಮಾರ, ಉಪ್ಪಾರರಿಗೂ ಕೆಲಸಕ್ಕೆ ಕೊರತೆ ಇಲ್ಲ. ಕಾಳಿನ ಬೆಲೆಯು ಮೊದಲಿನ ನಾಲ್ಕು ಪಾಲು ಬೆಳೆದದೆ. ಆದ್ದರಿಂದ ೪ ಆಣೆಗಿಂತ ಕಡಿಮೆಗೆ ಕೂಲಿಯ ಗಂಡಸು ದೊರಿಯುವದಿಲ್ಲ, ಯೆರಡೂವರೆ ಆಣೆಗಿಂತ ಕಡಿಮೆಗೆ ಹೆಂಗಸು ದೊರಿಯುವದಿಲ್ಲ. ಬಡಿಗಿ ಕಮ್ಮಾರರ ಕೂಲಿಯು ದಿನಕ್ಕೆ ೧೦ ಆಣೆಯಿಂದ ೧ ರೂಪಾಯಿಯ ವರೆಗೆ ಬೆಳೆದದೆ.

**ತೂಕ ಮಾಪುಗಳು.**—ನಾಲ್ಕೂ ಜಿಲ್ಲೆಗಳಲ್ಲಿ ತೂಕ ಮಾಪುಗಳು ವೊಂದೇ ಸವನಾಗಿ ಇರುವದಿಲ್ಲ. ಬೇರೆ ಬೇರೆ ಜಿಲ್ಲೆಗಳಲ್ಲಿ, ಬೇರೆ ಬೇರೆ ತಾಲೂಕುಗಳಲ್ಲಿ, ಬೇರೆ ಬೇರೆ ಪೇಟೆಗಳಲ್ಲಿ ಸಹ ಬೇರೆ ಬೇರೆ ಪ್ರಕಾರದ ತೂಕ ಮಾಪುಗಳು ನಡಿಯುತ್ತವೆ. ಆದರೂ ವಿಜಾಪುರ, ಬೆಳಗಾವೀ ಜಿಲ್ಲೆಗಳಲ್ಲಿ ಭಿನ್ನತ್ವವು ಬಹಳ ಇರುವದಿಲ್ಲ; ಧಾರವಾಡ ಜಿಲ್ಲೆಯಲ್ಲಿ ಬಹಳ ಇರುತ್ತದೆ; ಕಾನಡಾ ಜಿಲ್ಲೆಯಲ್ಲಿ ಯೆಲ್ಲಕ್ಕೂ ಹೆಚ್ಚು, ಅಂದರೆ ಬೇರೆ ಬೇರೆ ತಾಲೂಕಿನ ತೂಕ ಮಾಪುಗಳೂ ಅವುಗಳ ಹೆಸರುಗಳೂ ಸಹ ಬೇರೆ ಬೇರೆ ಇರುತ್ತವೆ. ಆದರೆ ಆ ಜಿಲ್ಲೆಯಲ್ಲಿ ತೂಕ ಮಾಪುಗಳ ಬೊಬ್ಬಾಟವು ಬಹಳ ಇದ್ದಂತೆ ತೋರುವದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ತೂಕ ಮಾಪುಗಳ ಹೆಸರುಗಳು ವೊಂದೇ ಇದ್ದು, ಅವುಗಳ ಪರಿಮಾಣಗಳು ಬೇರೆ ಬೇರೆ ಇರುವದರಿಂದ ಚಿಲ್ಲರೆ ಗಿರಾಕಿಗಳಿಗೆ ಮೋಸ ಮಾಡಲಿಕ್ಕೆ ಬಹಳ ಆಸ್ಪದವಾಗುತ್ತದೆ. ಒಟ್ಟಿಗೆ ತೂಕ ಮಾಪುಗಳ ಗೊಂದಲವು ಧಾರವಾಡ ಜಿಲ್ಲೆಯಲ್ಲಿ ಇದ್ದಷ್ಟು ಯೆಲ್ಲಿಯೂ ಇಲ್ಲೆಂದು ಹೇಳ ಬಹುದು.

ಆದಾಗ್ಯೂ ನಾಲ್ಕೂ ಜಿಲ್ಲೆಗಳ ತೂಕ ಮಾಪುಗಳಲ್ಲಿ ವೊಂದು ದೊಡ್ಡ ಸಾಮ್ಯವಿರುವದೇನಂದರೆ, ಸರಕಾರೀ ರೂಪಾಯಿ ತೂಕವೇ ಸೇರೆ ಯೆಂದು ವಾಡಿಕೆಯಾಗಿ ಯೆಣಿಸಲ್ಪಡುತ್ತದೆ; ರೂಪಾಯಿ ತೂಕವನ್ನು ಲೆಕ್ಕದೊಳಗೆ ತಕ್ಕೊಳ್ಳದಂಥ ತೂಕ ಮಾಪುಗಳು ಯೆಲ್ಲಿಯೂ ಇಲ್ಲೆಂದು ಹೇಳ ಬಹುದು. ಆದ್ದರಿಂದ ಮಾರಾಟ ಮಾಡುವವರಿಗೂ ಕೊಳ್ಳುವವರಿಗೂ ಲಾಭ ಹಾನಿಗಳ ಲೆಕ್ಕ ಮಾಡಿ ಕೊಳ್ಳಲಿಕ್ಕೆ ತಕ್ಕ ಮಟ್ಟಿಗೆ ಅನುಕೂಲವಾಗುತ್ತದೆ. ತೂಕಗಳಲ್ಲಿಯೂ ಮಾಪುಗಳಲ್ಲಿಯೂ ಯೆರಡೆರಡು ಮುಖ್ಯ ಭೇದಗಳಿರುತ್ತವೆ. ಅವುಗಳನ್ನು ಕೆಳಗೆ ವಿವರಿಸುತ್ತೇವೆ.

**೧. ಬೆಳ್ಳಿ, ಬಂಗಾರ, ಮುಂತಾದ ಬೆಲೆಯುಳ್ಳ ಪದಾರ್ಥಗಳ ತೂಕಗಳು.**—೮ ಗುಂಜಿಗೆ ೧ ಮಾಶಿ, ೧೨ ಮಾಶಿಗೆ ೧ ತೊಲಿ. ಈ ಕೋಷ್ಟಕವು ಯೆಲ್ಲ ಕಡೆಯಲ್ಲಿ ನಡಿಯುತ್ತದೆ. ಸರಕಾರೀ ರೂಪಾಯಿಯು ೧೮೦ ಗ್ರೇನಿನ ತೂಕವಿರುತ್ತದೆ; ಅದು ೯೧ ಗುಂಜಿ ಯೆಂದು ಯೆಣಿಸಲ್ಪಡುತ್ತದೆ. ಗುಂಜಿ, ಅಂದರೆ ಗುಲಗುಂಜಿಗಳು ತೂಕದಲ್ಲಿ ಹೆಚ್ಚು ಕಡಿಮೆ ಇದ್ದಾಗ್ಯೂ, ರೂಪಾಯಿಯ ತೂಕದಲ್ಲಿ ಯೆಷ್ಟು ಮಾತ್ರವೂ ಹೆಚ್ಚು ಕಡಿಮೆ ಇರುವದಿಲ್ಲಾದ ಕಾರಣ ಗುಂಜಿಯ ತೂಕವು ನಿಯಮಿತವಾದದ್ದಾಗುತ್ತದೆ. ಕೆಲವು ಕಡೆಯಲ್ಲಿ, ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ, ಆನೇ ದುಡ್ಡಿನ ತೂಕವು ವೊಂದು ತೊಲಿ ಯೆಂದು ಯೆಣಿಸಲ್ಪಡುತ್ತದೆ. ಆದರ ತೂಕವಾದರೂ ಸರಕಾರೀ

ರೂಪಾಯಿಯಂತೆ ನಿಯಮಿತವಾದದ್ದೇ ಇರುತ್ತದೆ. ಆನೇ ದುಡ್ಡು ಸರಕಾರೀ ರೂಪಾಯಿಗಿಂತ ೫ ಗುಂಜಿ ಹೆಚ್ಚಿರುತ್ತದೆ. ವಿಜಾಪುರ ಹೊರ್ತಾಗಿ ಬೇರೆ ಕಡೆಯಲ್ಲಿ ರೂಪಾಯಿ ತೂಕದಿಂದಲೇ ವ್ಯವಹಾರವು ನಡಿಯುತ್ತದೆ. ಆದರೂ ಆನೇ ದುಡ್ಡಿಗೂ ರೂಪಾಯಿಗೂ ಇರುವ ೫ ಗುಂಜಿಯ ಅಂತರವನ್ನು ಲೆಕ್ಕದಲ್ಲಿ ಹಿಡಿಯುವರು. ಉದಾಹರಣಾರ್ಥವಾಗಿ ವಿಜಾಪುರ ಜಿಲ್ಲೆಯಲ್ಲಿ ೧೮ ರೂಪಾಯಿಗೆ ತೊಲಿಯಂತೆ ಬಂಗಾರವು ಮಾರುತ್ತಿದ್ದರೆ, ಬೇರೆ ಕಡೆಯಲ್ಲಿ ೧೭ ರೂಪಾಯಿ, ೧ ಆಣೆಗೆ ರೂಪಾಯಿ ತೂಕದಂತೆ ದರ ಬೀಳುತ್ತದೆ. ವಿಜಾಪುರ ಜಿಲ್ಲೆಯಲ್ಲಿ ೨೦ ತೊಲಿಯಂದರೆ ವೊಂದು ಶೇರೆಂದು ಯೆಣಿಸುವರು; ಬೇರೆ ಕಡೆಯಲ್ಲಿ ೨೪ ರೂಪಾಯಿ ತೂಕವೆಂದರೆ ವೊಂದು ಶೇರೆಂದೆಣಿಸುವರು. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಗೋವೆಯ ಸೊನ್ನಗಾರರು ಮಾತ್ರ ಮೇಲಿನ ಕೋಷ್ಟಕದಂತೆ ವ್ಯವಹಾರ ಮಾಡುವರು. ಬೇರೆ ಜನರು ಉಪಯೋಗಿಸುವ ಕೋಷ್ಟಕವು ಬೇರೆ ಇರುತ್ತದೆ. ಅದು—೬ ತಂಡುಲಕ್ಕೆ ೧ ಗುಂಜಿ, ೨೪ ಗುಂಜಿಗೆ ೧ ವರ್ತುಕ, ೩೩ ವರ್ತುಕಕ್ಕೆ ೧ ತೊಲಿ. ಕಾರವಾಡದಲ್ಲಿ ಮಾತ್ರ ೨೦ ತೊಲಿಯ ಶೇರು ನಡಿಯುತ್ತದೆ; ಬೇರೆ ಕಡೆಯಲ್ಲಿ ಮೇಲೆ ಹೇಳಿದಂತೆ ೨೪ ರೂಪಾಯಿ ತೂಕ ಶೇರು ನಡಿಯುತ್ತದೆ.

೨. ಅಂಗಡಿಯ ಸರಕುಗಳ ತೂಕಗಳು.—ಈ ತೂಕಗಳಿಗೆ ರೂಪಾಯಿ ತೂಕವೇ ಯೆಲ್ಲಕ್ಕೂ ಕೆಳಗಿನ ಮೇರೆಯಾಗಿರುತ್ತದೆ. ಶೇರಿನ ಪರಿಮಾಣವು ಯೆಲ್ಲ ಕಡೆಯಲ್ಲಿ ೨೦ ರೂಪಾಯಿ ತೂಕವಿರುತ್ತದೆ; ಕಾನಡಾ ಜಿಲ್ಲೆಯಲ್ಲಿ ೨೪ ರೂಪಾಯಿ ತೂಕವಿರುತ್ತದೆ. ವಾಡಿಕೆಯಾಗಿ ೧೨ ಶೇರಿಗೆ ಧಡೆ, ೪ ಧಡೆಗೆ ೧ ಮಣ, ೨೦ ಮಣಕ್ಕೆ ೧ ಖಂಡಗ, ಈ ಕೋಷ್ಟಕವು ಯೆಲ್ಲ ಕಡೆಯಲ್ಲಿ ನಡಿಯುತ್ತದೆಂದು ಹೇಳ ಬಹುದು. ಆದರೆ ಧಡೆಯ ಪರಿಮಾಣವು ೧೦ರಿಂದ ೧೪ ಶೇರಿನ ವರೆಗೆ ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ಇರುತ್ತದೆ. ಇಷ್ಟೇ ಅಲ್ಲ, ವೊಂದೇ ಊರಲ್ಲಿ ಸಹ ಬೇರೆ ಬೇರೆ ಪದಾರ್ಥಗಳ ಧಡೆಯು ಬೇರೆ ಬೇರೆ ಇರುತ್ತದೆ. ಈ ಗೊಂದಲವು ಧಾರವಾಡ ಜಿಲ್ಲೆಯಲ್ಲಿ ಪರಮಾವಧಿ ಇರುತ್ತದೆ. ಉದಾಹರಣಾರ್ಥವಾಗಿ—ತಾವ್ರ ಹಿತ್ತಾಳಿಗಳ ಧಡೆ ೧೪ ಶೇರು, ಕಬ್ಬಿಣ, ಉಕ್ಕುಗಳ ಧಡೆ ೧೨ ಶೇರು, ಅರಳಿ, ತಂಬಾಕ, ತುಪ್ಪಗಳ ಧಡೆ ೧೩ ಶೇರು, ಬೆಲ್ಲ ಸಕ್ಕರಿ, ಮುಂತಾದ ಆಹಾರದ ಪದಾರ್ಥಗಳ ಧಡೆ ೧೨½ ಶೇರು, ಹಿಂಡಿ ಹತ್ತಿ ಕಾಳುಗಳ ಧಡೆ ೧೦ ಶೇರು, ಇತ್ಯಾದಿ. ಕಾನಡಾ ಜಿಲ್ಲೆಯಲ್ಲಿಯೂ ಬಹುತರ ಇದೇ ಪ್ರಕಾರದ ಗೊಂದಲವಿರುತ್ತದೆ.

೩. ಧಾನ್ಯಗಳನ್ನು ಅಳಿಯುವ ಮಾಪು.—ಕೃಷ್ಣೆಯ ಉತ್ತರದಲ್ಲಿ ೮೦ ರೂಪಾಯಿ ತೂಕ ಶುದ್ಧ ನೀರು ಹಿಡಿಯುವಷ್ಟು ಮಾಪಿಗೆ ವೊಂದು ಶೇರೆಂದೆನ್ನುವರು; ಕೃಷ್ಣೆಯ ದಕ್ಷಿಣದಲ್ಲಿ ಬೆಳಗಾವೀ ಜಿಲ್ಲೆ ಸಹಿತ ೮೦ ರೂಪಾಯಿ ತೂಕ ಸಮ ಭಾಗ ನವಧಾನ್ಯಗಳ ಮಾಪಿಗೆ ಶೇರೆನ್ನುವರು. ನವಧಾನ್ಯಗಳೆಂದರೆ ಅಕ್ಕಿ, ಜೋಳ, ಶೆಜ್ಜಿ, ಗೋಧಿ, ಕಡ್ಲೆ, ಹುರಳಿ, ತೊಗರಿ, ಹೆಸರು, ಮಡಿಕೆ. ಈ ಶೇರು ನೀರಿನ ತೂಕದ ಶೇರಿಗಿಂತ ೪ ರೂಪಾಯಿ ಕಡಿಮೆ ಇರುತ್ತದೆ. ಧಾರವಾಡ ಜಿಲ್ಲೆಯ ಶೇರಿನ ಗೊಂದ

ಲವು ಯೆಲ್ಲಕ್ಕೂ ಹೆಚ್ಚಿರುತ್ತದೆ. ೧೪೭ರಿಂದ ೧೬೦ ರೂಪಾಯಿ ತೂಕದ ವರೆಗೆ ನೀರಿನ ಮಾಪಿಗೆ ಶೇರೆನ್ನುವರು. ಆದರೆ ವೊಂದು ತಾಲೂಕಿನಲ್ಲಿ ೧೪೭, ಬೇರೊಂದರಲ್ಲಿ ೧೪೦, ಮತ್ತೊಂದರಲ್ಲಿ ೧೫೦, ಇನ್ನೊಂದರಲ್ಲಿ ೧೬೦, ಹೀಗೆ ಭಿನ್ನ ಭಿನ್ನ ಪರಿಮಾಣಗಳಿರುತ್ತವೆ. ಒಂದೇ ಪೇಟೆಯಲ್ಲಿ ಯೆರಡು ಬಗೆಯ ಶೇರುಗಳನ್ನು ಕಾಣುವದು ಅಪರೂಪವಲ್ಲ. ೪ ಶೇರಿಗೆ ೧ ಸೊಲಿಗೆ, ಪಾಯಲಿ, ಅಥವಾ ಚಿಟ್ಟಿ; ೧೬ ಸೊಲಿಗೆಗೆ ೧ ಮಣ, ಅಂಡಿಗೆ, ಅಥವಾ ಒಕ್ಕಳ; ೨೦ ಮಣಕ್ಕೆ ಅಥವಾ ೧೦ ಹೇರಿಗೆ ೧ ಖಂಡಗ; ಈ ಪರಿಮಾಣಗಳು ಬಹುತರ ವೊಂದೇ ಸವನಾಗಿ ಯೆಲ್ಲ ಕಡೆಯಲ್ಲಿ ನಡಿಯುತ್ತವೆ. ಆದರೆ ಧಾರವಾಡ ಜಿಲ್ಲೆಯಲ್ಲಿ ೨೦ ಹೇರಿಗೆ ಖಂಡಗವೆನ್ನುವರು. ಆದ್ದರಿಂದ ಧಾರವಾಡದ ಖಂಡಗವು ಬೆಳಗಾವಿಯ ಖಂಡಗದ ಸುಮಾರು ೪ ಪಾಲಷ್ಟು ಆಗುತ್ತದೆ; ಯಾಕಂದರೆ ಶೇರು, ಖಂಡಗ, ಯೆರಡೂ ಇಮ್ಮಡಿ ಇರುತ್ತವೆ. ಕಾನಡಾ ಜಿಲ್ಲೆಯಲ್ಲಿ ಬೇರೆ ಬೇರೆ ತಾಲೂಕುಗಳಲ್ಲಿ ಪರಿಮಾಣಗಳ ಹೆಸರುಗಳು ಬೇರೆ ಬೇರೆ ಇರುತ್ತವೆ. ಉದಾಹರಣಾರ್ಥವಾಗಿ — ಕಾರವಾಡ, ಅಂಕೋಲಾ. ತಾಲೂಕುಗಳಲ್ಲಿ, ೩೨ ತೊಲಿಗೆ ೧ ಅಠವಾ, ೬ ಅಠವಕ್ಕೆ ೧ ಕುಡವ, ೨೦ ಕುಡವಕ್ಕೆ ೧ ಖಂಡಗ, ೨೦ ಖಂಡಗಕ್ಕೆ ೧ ಕುಂಬ. ಹೊನ್ನಾವರ ಕುಮಟಾ ತಾಲೂಕುಗಳಲ್ಲಿ ೬ ತೊಲಿಗೆ ೧ ಸೊಲಿಗೆ, ೨ ಸೊಲಿಗೆಗೆ ೧ ಅರವಲ, ೨ ಅರವಲಕ್ಕೆ ೧ ಸಿಪ್ಟಿ, ೨ ಸಿಪ್ಟಿಗೆ ೧ ಶೇರು, ೩ ಶೇರಿಗೆ ೧ ಕುಡವ, ೧೪ ಕುಡವಕ್ಕೆ ೧ ಮುಡಿ, ೨೦ ಮುಡಿಗೆ ೧ ಖಂಡಗ, ೪೨ ಮುಡಿಗೆ ೧ ಕೋರ್ಜಿ. ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳಲ್ಲಿ ೯೬ ರೂಪಾಯಿ ತೂಕ ಕಾಳು ಹಿಡಿಯುವಷ್ಟು ಮಾಪಿಗೆ ಶೇರೆನ್ನುವರು; ಚಿಟ್ಟಿ, ಅಂಡಿಗೆ, ಖಂಡಗ, ಇವೆಲ್ಲ ಮೇಲೆ ಹೇಳಿದಂತೆ.

೪. **ಹಾಲು, ಯೆಣ್ಣೆ ಮುಂತಾದ ರಸ ಪದಾರ್ಥಗಳನ್ನು ಅಳಿಯುವ ಮಾಪು.**— ಹಾಲನ್ನು ಹಿತ್ತಾಳೆಯ ಪಾತ್ರೆಗಳಿಂದ ಅಳಿಯುವರು. ಅದರ ಶೇರು ೮೦ ರೂಪಾಯಿ ತೂಕದ್ದು. ಯೆಣ್ಣೆಯ ಶೇರು ೨೦ ರೂಪಾಯಿ ತೂಕ; ಇದನ್ನು ಮಗಿಗಳಿಂದ ಅಳಿಯುವರು. ಮಗಿ ೫ ಇಲ್ಲವೆ ೬ ಶೇರು ಇರುತ್ತವೆ. ೮ ಮಗಿಯಂದರೆ ೧ ಮಣ. ಆದರೆ ತುಪ್ಪ, ಜೇನು ತುಪ್ಪ, ಕಾಕವಿ, ಇವುಗಳನ್ನು ತೂಗಿ ಕೊಡುವರು.

**ಭೂಮಾಪನ.**

**ಭೂಮಾಪನದ ಪರಿಮಾಣಗಳು.**— ಹಳೆ ಪರಿಮಾಣಗಳು ಮೂರು ಬಿಘೆಯೆಂಬೆರಡು ಇರುತ್ತವೆ. ಕಲಬುರ್ಗೆಯ ಬಾಮನೀ ರಾಜ್ಯದಲ್ಲಿ ವಿಠ್ಠಲ ಪಂತನೆಂಬವನು ತನ್ನ ಸ್ವಂತ ಮಾರಿನಿಂದ ಭೂಮಿಯನ್ನು ಅಳೆದು ಬಾಮನೀ ಪರಗಣಗಳಲ್ಲಿ ಕಂದಾಯವನ್ನು ಗೊತ್ತು ಮಾಡಿದನು. ಆ ಮಾರಿಗೆ ವಿಠ್ಠಲ ಪಂತೀ ಮಾರೆನ್ನುವರು. ಒಂದು ವಿಠ್ಠಲ ಪಂತೀ ಮಾರು ಸುಮಾರು ೩೨ ಯೆಕರು ಇರುತ್ತದೆ. ವಿಜಯನಗರದ ಅರಸರ ಆಳಿಕೆಯಲ್ಲಿ ಮತ್ತೊಮ್ಮೆ ಭೂಮಿಯನ್ನು ಅಳಿದು ಬೇರೆ ಪ್ರಕಾರದ ಮಾರುಗಳನ್ನು ಗೊತ್ತು ಮಾಡಿದರು; ಆ ಮಾರಿಗೆ ರಾಯರೇಖೆಯ ಮಾರೆನ್ನುವರು; ಇದು ಸುಮಾರು ೧೬ ಯೆಕರು ಆಗುತ್ತದೆ. ಪೇಶವಾಯಿಯ ಅಮಲಿನಲ್ಲಿ ಬಿಘೆಯ ಅಳತೆಯು ರೂಢಿಯಲ್ಲಿ ಬಂತು. ಅದರ ಕೋಷ್ಟಕ ಹ್ಯಾಗೆಂದರೆ—

೪ ಚಚೌಕು ಅಂಗುಲಕ್ಕೆ ೧ ಮುಷ್ಟಿ, ೩ ಮುಷ್ಟಿಗೆ ೧ ಗೇಣು, ೨ ಗೇಣಿಗೆ ೧ ಮೊಳ, ೫⅓ ಮೊಳಕ್ಕೆ ೧ ಕಾಠಿ, ೨೦ ಕಾಠಿಗೆ ೧ ಪಾಂಡು, ೨೦ ಪಾಂಡಿಗೆ ೧ ಬಿಘೆ, ೧೨೦ ಬಿಘೆಗೆ ೧ ಚಾಹೂರು. ಒಂದು ಬಿಘೆಯೆಂದರೆ ಸುಮಾರು ೧⅔ಯಿಂದ ೧¾ ಯೆಕರು ಆಗುತ್ತದೆ. ಸನ್ ೧೮೪೪ರಿಂದ ಮೋಜಣೀ ಆರಂಭವಾಗಿ ಆಣೆ, ಗುಂಠೆ, ಯೆಕರುಗಳು ರೂಢಿಯೊಳಗೆ ಬಂದವು. ಒಂದು ಯೆಕರೆಂದರೆ ೪೩೫೬೦ ಚಚೌಕು ಫೂಟು ಆಗುತ್ತದೆ. ಒಕ್ಕಲಿಗರು ಒಂದು ಕೂರಿಗೆಯಿಂದ ಒಂದು ದಿನದಲ್ಲಿ ಬಿತ್ತುವಷ್ಟು ಭೂಮಿಗೆ ಕೂರಿಗೆಯನ್ನುವರು. ಒಂದು ಕೂರಿಗೆಯು ೪ ಯೆಕರಿನಿಂದ ೮ ಯೆಕರಿನ ವರೆಗೆ ಆಗುತ್ತದೆ.

**ಕಾಳಿನ ಬೆಲೆ.**

ಕಾಳಿನ ಬೆಲೆಯು.—ಹಿಂದೆ ಹೇಳಿದಂತೆ ಬ್ರಿಟಿಶ ಸರಕಾರದ ಅಮಲು ಆದ ಕಾಲಕ್ಕೆ ಯಾವತ್ತು ಧಾನ್ಯಗಳು ಬಹಳ ಅಗ್ಗ ಇದ್ದವು. ಯಾಕಂದರೆ ಆಗ ಈ ದೇಶದ ಮಾಲು ಯಾವದೂ ಪರದೇಶಕ್ಕೆ ಯೆಲ್ಲಿಯೂ ಹೋಗುತ್ತಿದ್ದಿಲ್ಲ. ಈ ಸರಕಾರದ ಅಮಲಿನಲ್ಲಿ ವ್ಯಾಪಾರವು ಬಹು ಜೇಗ ಬೆಳೆಯುತ್ತ ಬಂದು ಹತ್ತಿ, ಗೋಧಿ, ಅಗಸಿ, ಅಕ್ಕಿ, ಮುಂತಾದ ಹುಟ್ಟುವಳಿಗಳು ಕ್ರಮು ಕ್ರಮವಾಗಿ ಪರದೇಶಗಳಿಗೆ ಹೆಚ್ಚು ಹೆಚ್ಚು ಹೋಗ ಹತ್ತಿದವು. ಆದ್ದರಿಂದ ಕಾಳಿನ ಬೆಲೆಯು ಬರ ಬರುತ್ತ ತುಟ್ಟಿಯಾಗುತ್ತ ಬಂತು. ಇದರಿಂದ ರೈತರೂ ಕೂಲಿಕಾರರೂ ಮೊದಲಿಗಿಂತ ಹೆಚ್ಚು ಸುಖಿಗಳಾಗಲಿಕ್ಕೆ ಮಾರ್ಗವಾಗಿದೆ. ಸನ್ ೧೮೨೪ರಿಂದ, ಅಂದರೆ ಅದಕ್ಕೂ ಹಿಂದಿನಿಂದ ಈ ಹೊತ್ತಿನ ವರೆಗೆ ಪ್ರತಿ ವರ್ಷದ ಬೇರೆ ಬೇರೆ ಧಾನ್ಯಗಳ ಮಾರಾಟದ ಪಟ್ಟಿಗಳು ಕಲೆಕ್ಟರರ ಕಚೇರಿಗಳಲ್ಲಿ ಕಾದು ಇಡಲ್ಪಟ್ಟಿವೆ. ಮುಖ್ಯ ಮುಖ್ಯ ಧಾನ್ಯಗಳ ಬೆಲೆಯಲ್ಲಿ ಆಗಾಗ್ಗೆ ಆಗುತ್ತ ಬಂದ ಹೆಚ್ಚು ಕಡಿಮೆಗಳನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಿದ್ದೇವೆ.

### ಕಾಳಿನ ಬೆಲೆಯ ಕೋಷ್ಟಕ.

| ಧಾನ್ಯದ ಹೆಸರು. | ಸನ್ ೧೮೩೫ರಲ್ಲಿ ರೂಪಾಯಿಗೆ ಶೇರು. | ಪರಮಾವಧಿಯ ಅಗ್ಗದ ದರ. | | ಪರಮಾವಧಿಯ ತುಟ್ಟಿಯ ದರ. | | ಸನ್ ೧೮೭೫ರಲ್ಲಿ ರೂಪಾಯಿಗೆ ಶೇರು. |
|---|---|---|---|---|---|---|
| | | ರೂಪಾಯಿಗೆ ಪೌಂಡು. | ವರ್ಷ. | ರೂಪಾಯಿಗೆ ಪೌಂಡು. | ವರ್ಷ. | |
| **ಧಾರವಾಡ.** | | | | | | |
| ಜೋಳ...... | ೧೨೭ | ೧೬೭ | ೧೮೩೨ | ೧೯ | ೧೮೬೪ | ೬೦ |
| ಶೇಜ್ಜೆ ....... | ೧೦೫ | ೧೫೦ | ೧೮೪೩ | ೧೬ | ,, | ೫೬ |
| ಅಕ್ಕಿ ....... | ೬೦ | ೧೦೫ | ೧೮೪೪ | ೧೪ | .. | ೨೩ |
| **ಬೆಳಗಾವಿ.** | | | | | | |
| ಜೋಳ...... | ೬೦ | ೧೧೭ | ೧೮೪೯ | ೧೭ | ೧೮೬೩ | ೫೭ |
| ಗೋಧಿ...... | ೫೩ | ೧೦೫ | ೧೮೫೧ | ೧೦ | ೧೮೬೬ | ೪೦ |
| ಅಕ್ಕಿ ....... | ೪೩ | ೬೯ | ೧೮೩೧ | ೧೩ | ೧೮೨೨ | ೨೧ |

| ಧಾನ್ಯದ ಹೆಸರು. | ಸನ್ ೧೮೨೪ರಲ್ಲಿ ರೂಪಾಯಿಗೆ ಪೌಂಡು. | ಪರಮಾವಧಿಯ ಅಗ್ಗದ ದರ. | | ಪರಮಾವಧಿಯ ತುಟ್ಟಿಯ ದರ. | | ಸನ್ ೧೮೬೨ರಲ್ಲಿ ರೂಪಾಯಿಗೆ ಪೌಂಡು. |
|---|---|---|---|---|---|---|
| | | ರೂಪಾಯಿಗೆ ಪೌಂಡು. | ವರ್ಷ. | ರೂಪಾಯಿಗೆ ಪೌಂಡು. | ವರ್ಷ. | |
| **ವಿಜಾಪುರ.** | | | | | | |
| ಅಕ್ಕಿ ....... | ೨೫ | ೬೩ | ೧೮೩೭ | ೧೧ | ೧೮೬೪ | ೧೯ |
| ಸಜ್ಜೆ ....... | ೮೫ | ೧೭೮ | ೧೮೪೧ | ೧೪ | ೧೮೭೭ | ೬೫ |
| ಜೋಳ...... | ೯೧ | ೧೭೫ | ,, | ೧೨ | ,, | ೮೨ |
| ಗೋಧಿ...... | ೫೭ | ೧೦೦ | ೧೮೫೨ | ೧೧ | ,, | ೪೭ |
| ತೊಗರಿ...... | ೬೫ | ೨೦೭ | ೧೮೩೧ | ೧೨ | ,, | ೩೦ |
| **ಕಾನಡಾ.** | | | | | | |
| ಅಕ್ಕಿ, ಉತ್ತಮ . | ೩೭ | ೪೬ | ೧೮೪೭ | ೧೦ | ೧೮೭೯ | ೧೮ |
| ,, ಮಧ್ಯಮ . | ೫೪ | ೬೦ | ೧೮೫೧ | ೧೪ | ೧೮೬೪ | ೨೪ |
| ಗೋಧಿ...... | ೨೯ | ೪೯ | ೧೮೫೨ | ೧೨ | ,, | ೨೪ |
| ತೊಗರಿ...... | ೩೪ | ೩೮ | ೧೮೩೩ | ೧೧ | ೧೮೬೫ | ೨೧ |

ಒಂದು ಪೌಂಡೆಂದರೆ ಸುಮಾರು ೩೯ ರೂಪಾಯಿ ತೂಕವಾಗುತ್ತದೆ. ಮೂಲಗ್ರಂಥದಲ್ಲಿ ವಿವರಿಸಿದಷ್ಟೇ ಧಾನ್ಯಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಿದ್ದೇವೆ. ಮೇಲಿನ ಪಟ್ಟಿಯಿಂದ ಸನ್ ೧೮೫೧, ೫೦ರ ವರೆಗೆ ಧಾನ್ಯಗಳು ಅಗ್ಗವಾಗುತ್ತ ಬಂದವೆಂತಲೂ ಸನ್ ೧೮೬೪, ೧೮೭೭, ಇವೆರಡು ಬಹು ದೊಡ್ಡ ಬರಗಾಲದ ವರ್ಷಗಳಾದವೆಂತಲೂ ಸ್ಪಷ್ಟವಾಗುತ್ತದೆ.

**ಆಹಾರ.**

ಆಹಾರ.—ಬೈಲು ಶೀಮೆಯಲ್ಲಿ, ಅಂದರೆ ಇಡೀ ವಿಜಾಪುರ ಜಿಲ್ಲೆಯಲ್ಲಿಯೂ ಬೆಳಗಾವಿ ಧಾರವಾಡಗಳ ಗೋಕಾವಿ, ಅಥಣಿ, ನವಲಗುಂದ, ರೋಣ ತಾಲೂಕುಗಳಲ್ಲಿಯೂ, ಜೋಳವೇ ನಿವಾಸಿಗಳ ಮುಖ್ಯ ಆಹಾರವೆನಿಸುತ್ತದೆ. ಬೈಲು ಶೀಮೆಯ ನಿವಾಸಿಗಳು ವಾಡಿಕೆಯಾಗಿ ಜೋಳದ ನುಚ್ಚು, ಜೋಳದ ಬಕ್ಕರಿ, ಕಾರದ ಬೇಳೆ ಇಲ್ಲವೆ ಸಪ್ಪನ್ನ ಬೇಳೆ, ಇಷ್ಟು ಆಹಾರನ್ನು ತಕ್ಕೊಳ್ಳುವರು. ಪಲ್ಲೆಗಳು ಸಿಗುತ್ತಿದ್ದಲ್ಲಿ ಕೆಲವರು ಪಲ್ಲೆಯನ್ನು ನಿತ್ಯದ ಊಟದಲ್ಲಿ ತಕ್ಕೊಳ್ಳುವರು. ಒಕ್ಕಲಿಗರು ಮುಂತಾದ ಕಡಿಮೇ ಜನರು ಮಧ್ಯಾನ್ಹದಲ್ಲಿ ಪೊಪ್ಪತ್ತು ನುಚ್ಚು, ಉಣ್ಣುವರು; ಬೆಳಗಿನ ನೇರೆಗೂ ಸಂಜೆಯ ಊಟಕ್ಕೂ ರೊಟ್ಟಿ, ಕಾರದ ಬೇಳೆ, ಉಳ್ಳೀ ಗಡ್ಡಿ, ಬೆಳ್ಳುಳ್ಳಿಯ ಕಾರ, ಇಷ್ಟಿದ್ದರೆ ಸಾಕು. ಬಿಳೆ ಜೋಳದ ನುಚ್ಚು ರೊಟ್ಟಿಗಳು ಹೆಚ್ಚು ಮಿದುವಾಗಿಯೂ ರುಚಿಕರವಾಗಿಯೂ ಆಗುತ್ತಿರುವ ಕಾರಣ ಆ ಜೋಳ ಸಿಗುತ್ತಿದ್ದಲ್ಲಿ ಅದರ ನುಚ್ಚು ಬಕ್ಕರಿಗಳನ್ನೇ ವಿಶೇಷವಾಗಿ ಮಾಡುವರು. ವಿಜಾಪುರ ಜಿಲ್ಲೆಯಲ್ಲಿ

ಶೆಜ್ಜೆಯ ಬಕ್ಕರಿಯನ್ನು ಮಾಡುವ ರೂಢಿಯು ವಿಶೇಷವಿರುತ್ತದೆ; ಆದರೂ ಜೋಳದಷ್ಟು ಇಲ್ಲೆಂದು ಹೇಳ ಬಹುದು. ಶೆಜ್ಜೆಯ ನುಚ್ಚು ಮಾಡುವ ನಡಾವಳಿಯು ಯೆಲ್ಲಿಯೂ ಇಲ್ಲ. ಹಬ್ಬದ ದಿವಸಗಳಲ್ಲಿಯೂ ಲಗ್ನ ಮುಹೂರ್ತಗಳಲ್ಲಿಯೂ ಕಡ್ಲೇ ಬೇಳೆಯ ಹೂರಣದ ಹೋಳಿಗೆ, ಅಕ್ಕಿಯ ಅನ್ನ, ಗೋಧಿಯ ಪಾಯಸ, ಸಾರು, ಆಮಟಿ, ಇಷ್ಟು ಮುಖ್ಯ ಪದಾರ್ಥಗಳನ್ನು ಮಾಡುವರು. ಲಿಂಗವಂತರಲ್ಲಿಯೂ ಬೇರೆ ಜಾತಿಗಳಲ್ಲಿಯೂ ಗೋಧಿಯ ಹುಗ್ಗಿಯನ್ನು ಇಲ್ಲವೆ ಶಾವಿಗೆಯ ಪಾಯಸವನ್ನು ಹೆಚ್ಚಾಗಿ ಮಾಡುವರು. ಬುಂದೆ, ಖೀರು, ಜಿಲೇಬಿ, ಮುಂತಾದ ಪಕ್ವಾನ್ನಗಳನ್ನು ಬ್ರಾಹ್ಮಣರು ಮುಂತಾದ ಉತ್ತಮ ಕುಲದವರು ಕ್ವಚಿತ್ತಾಗಿ ಮಾಡುವರು. ಮಲ್ಲಾಡದಲ್ಲಿ ನುಚ್ಚು ಯಾರು ಮಾಡುವದಿಲ್ಲ. ಅದಕ್ಕೆ ಬದಲಾಗಿ ಅಕ್ಕಿಯ ಅನ್ನವನ್ನೇ ಯೆಲ್ಲರೂ ಮಾಡುವರು. ಕಡಿಮೇ ಜಾತಿಗಳ ಜನರು ವಾಡಿಕೆಯಾಗಿ ದಿನಕ್ಕೆ ವೊಮ್ಮೆ ಮಾತ್ರ ಅನ್ನ ಮಾಡುವರು. ಜೋಳದ ರೊಟ್ಟಿಯ ನಡಾವಳಿಯು ಬೈಲು ಶೀಮೆಯಂತೆಯೇ ಇರುತ್ತದೆ. ದೈವುಳ್ಳವರು ಅಪರೂಪವಾಗಿ ಗೋಧಿಯ ರೊಟ್ಟಿಯನ್ನು ತಕ್ಕೊಳ್ಳುವರು. ದಿನದ ಊಟದಲ್ಲಿ ತೊಗರೇ ಬೇಳೆಯು ಬೈಲು ಶೀಮೆಯಂತೆಯೇ ಮಲ್ಲಾಡದಲ್ಲಿಯೂ ಬೇಕಾಗುತ್ತದೆ. ಹಬ್ಬ ಕಾರ್ಯ ಪ್ರಯೋಜನಗಳ ಆಹಾರವಾದರೂ ಬೈಲು ಶೀಮೆಯಂತೆಯೇ ನಡಿಯುತ್ತದೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಹೂರಣದ ಹೋಳಿಗೆಗೆ ಬದಲಾಗಿ ಕಡಬು ಮಾಡುವ ನಡಾವಳಿ ಹೆಚ್ಚಿರುತ್ತದೆ. ಬೈಲು ಶೀಮೆಯ ಜನರಷ್ಟು ಮಲ್ಲಾಡದ ಜನರಿಗೆ ಆಹಾರ ಬೇಕಾಗುವದಿಲ್ಲ; ಆದರೆ ಅವರ ಮೈ ಕಸುವು ಬೈಲು ಶೀಮೆಯವರಿಗಿಂತ ಬಹಳ ಕಡಿಮೆ ಇರುತ್ತದೆ. ಘಟ್ಟದ ಕೆಳಗೆ ಅಕ್ಕಿಯೇ ಮುಖ್ಯ ಆಹಾರವಾಗಿರುತ್ತದೆ. ಯೆಲ್ಲರೂ ಬೆಳಿಗ್ಗೆ ಅಕ್ಕಿಯ ಗಂಜಿಯನ್ನು ಮಾಡಿ ಕುಡಿಯುವರು; ಮಧ್ಯಾನ್ಹಕ್ಕೂ ಸಂಜೆಗೂ ಅಕ್ಕಿಯ ಅನ್ನವನ್ನೇ ತಕ್ಕೊಳ್ಳುವರು. ಜೋಳದ ರೊಟ್ಟಿಯನ್ನು ಯಾರೂ ಮುಟ್ಟುವದಿಲ್ಲ. ದೈವುಳ್ಳವರು ಅಪರೂಪವಾಗಿ ಗೋಧಿಯ ರೊಟ್ಟಿಯನ್ನು ತಕ್ಕೊಳ್ಳುವರು. ಹಬ್ಬದ ಊಟದಲ್ಲಿ ಹೂರಣವು ಬಹುತರ ಯಾರಿಗೂ ಗೊತ್ತಿಲ್ಲೆಂದು ಹೇಳ ಬಹುದು; ಶಾವಿಗೆಯ ಪಾಯಸ, ಗೋಧಿಯ ಪಾಯಸ, ಅಕ್ಕಿಯ ಕಡಬು, ವಡಿ, ಇಷ್ಟೇ ಹಬ್ಬಗಳಲ್ಲಿಯೂ ಕಾರ್ಯ ಪ್ರಯೋಜನಗಳಲ್ಲಿಯೂ ಆಗುವ ಮುಖ್ಯ ಪಕ್ವಾನ್ನಗಳು. ಘಟ್ಟದ ಕೆಳಗೆ ಬಹುತರ ಯಾವತ್ತು ಜನರು ನಿತ್ಯದ ಊಟದಲ್ಲಿ ಮೀನ ತಿನ್ನುವರು. ಬೈಲು ಶೀಮೆಯ ವೊಕ್ಕಲಿಗರಿಗೆ ಉಳ್ಳೇ ಗಡ್ಡಿ ಹ್ಯಾಗೋ, ಹಾಗೆ ಘಟ್ಟದ ಕೆಳಗಿನ ಜನರಿಗೆ ಮೀನು ಪ್ರೀತಿಕರವಾಗಿರುತ್ತದೆ. ಘಟ್ಟದ ಕೆಳಗಿನವರ ಮೈಕಸುವು ಮಲ್ಲಾಡದವರಿಗಿಂತಲೂ ಕಡಿಮೆ ಯೆಂದು ಹೇಳ ಬಹುದು. ಆದರೆ ಅವರ ಉದ್ಯೋಗ ಶ್ರಮಗಳು ಈ ಶೀಮೆಯಲ್ಲಿ ಯೆಲ್ಲರಿಗಿಂತ ಹೆಚ್ಚೆಂದು ಹೇಳ ಬಹುದು.